ಶ್ರೀ ನರಹರಿ ಸದ್ಗುರುಗಳು
ಬಳ್ಳಾರಿ

ಶ್ರೀಃ

ಶ್ರೀ ಗುರುಪರಂಪರಾಚರಿತಮ್

ಬಳ್ಳಾರಿ ಶ್ರೀ ನರಹರಿಗುರುಗಳ ಪರಂಪರೆ

(ಕನ್ನಡ ಅನುವಾದ ಸಹಿತ)

ಲೇಖಕ

ವಿದ್ವಾನ್ ಎನ್. ರಂಗನಾಥಶರ್ಮಾ

ಆಗಸ್ಟ್ ೧೯೭೯
೧೦೦೦ ಪ್ರತಿಗಳು

ಪ್ರಕಾಶಕರು :
ಎನ್. ಶ್ರೀಪತಿ
ಪಾತ್ರೆಗಳ ವ್ಯಾಪಾರಿಗಳು
ಪೋ. ಸೊರಬ
ಶಿವಮೊಗ್ಗಾ ಜಿಲ್ಲೆ

ಕ್ರಯ : **40 ಪೈಸೆ**

ಮುದ್ರಣ :
ಪ್ರಭಾ ಮುದ್ರಣಾಲಯ
ಬಸವನಗುಡಿ, ಬೆಂಗಳೂರು-೪

ನಿವೇದನೆ

ತಾವದ್ ಗರ್ಜಂತಿ ಶಾಸ್ತ್ರಾಣಿ ಜಂಬುಕಾ ವಿಪಿನೇ ಯಥಾ।
ನ ಗರ್ಜತಿ ಮಹಾಶಕ್ತಿರ್ಯಾವದ್ ವೇದಾಂತಕೇಸರೀ ॥

"ಮಹಾಶಕ್ತಿಯುಳ್ಳ ವೇದಾಂತವೆಂಬ ಸಿಂಹವು ಗರ್ಜಿಸುವವರೆಗೆ ಮಾತ್ರ ತರ್ಕಾದಿಶಾಸ್ತ್ರಗಳು ಕಾಡಿನಲ್ಲಿರುವ ನರಿಗಳಂತೆ ಕೂಗುತ್ತವೆ" ಎಂಬ ವಚನವು ಅರ್ಥವತ್ತಾದದ್ದು. ಇತರ ಶಾಸ್ತ್ರಗಳು ವೇದಾಂತವೆಂಬ ಭವ್ಯಸೌಧದ ಸೋಪಾನಗಳೆಂದು ಹೇಳಬಹುದು. ಉಪನಿಷತ್ ಸಿದ್ಧಾಂತವೇ ವೇದಾಂತ. ಔಪನಿಷದರೆಂದರೆ ವೇದಾಂತಿಗಳು. ಪರಮ ಪುರುಷಾರ್ಥವೆನಿಸಿದ ಮೋಕ್ಷದ ದಾರಿಗೆ ವೇದಾಂತವು ಕೈದೀವಿಗೆ. ಉಪನಿಷತ್ ಸಿದ್ಧಾಂತವು ಗುರುಪರಂಪರೆಯಿಂದ ತಿಳಿಯತಕ್ಕದ್ದಲ್ಲದೆ ವಾದ ಚಮತ್ಕಾರದಿಂದಲ್ಲ. 'ಅಸಂಪ್ರದಾಯವಿತ್ ಸರ್ವಶಾಸ್ತ್ರವಿದಪಿ ಮೂರ್ಖವ ದೇವ ಉಪೇಕ್ಷಣೀಯಃ' ಎಂದು ಶ್ರೀ ಶಂಕರಭಗವತ್ಪಾದರು ಗೀತಾಭಾಷ್ಯ ದಲ್ಲಿ ಅಪ್ಪಣೆಕೊಡಿಸಿದ್ದಾರೆ. "ಸಂಪ್ರದಾಯವನ್ನರಿಯದವನು ಸರ್ವಶಾಸ್ತ್ರ ಗಳನ್ನು ಬಲ್ಲವನಾದರೂ ಮೂರ್ಖನಂತೆಯೇ ಉಪೇಕ್ಷಾರ್ಹನು" ಎಂದು ಅದರ ಅರ್ಥ. ಈ ದೃಷ್ಟಿಯಿಂದ ನೋಡಿದಾಗ 'ಗುರುರ್ಬ್ರಹ್ಮಾ ಗುರುರ್ವಿಷ್ಣುಃ....' ಎಂಬ ಶ್ಲೋಕದ ಮಹತ್ತ್ವವು ತಿಳಿದುಬರುವುದು.

ಶ್ರೀಮನ್ನಾರಾಯಣನೇ ಮೊದಲು ಅಧ್ಯಾತ್ಮತತ್ತ್ವವನ್ನು ಬ್ರಹ್ಮನಿಗೆ ಉಪದೇಶಿಸಿದನೆಂದು ಶ್ರದ್ಧಾವಂತರ ನಂಬಿಕೆ. ಗುರುಪರಂಪರೆಯ ಮೂಲವು ಭಗವಂತನಿಂದಲೇ ಆರಂಭವಾಗುತ್ತದೆ. ನಾರಾಯಣ, ಬ್ರಹ್ಮ, ವಸಿಷ್ಠ, ಶಕ್ತಿ, ಪರಾಶರ, ವ್ಯಾಸ, ಶುಕ, ಗೌಡಪಾದ–ಈ ಕ್ರಮದಿಂದ ಬಂದ ವೇದಾಂತವು ಗೌಡಪಾದರಿಂದ ಗೋವಿಂದಯೋಗೀಂದ್ರರಿಗೂ ಅವರಿಂದ ಶ್ರೀ ಶಂಕರಾಚಾರ್ಯರಿಗೂ ಲಬ್ಧವಾಯಿತೆಂದು ತಿಳಿದು ಬರುತ್ತದೆ. ಶ್ರೀ ಶಂಕರಾಚಾರ್ಯರ ಶಿಷ್ಯರಲ್ಲಿ ನಾಲ್ವರು ಪ್ರಮುಖರು: ಪದ್ಮಪಾದ, ಹಸ್ತಾಮಲಕ, ತ್ರೋಟಕ ಮತ್ತು ಸುರೇಶ್ವರಾಚಾರ್ಯರು. ಈ ಶಿಷ್ಯವೃಂದದಿಂದ ಗುರುಪರಂಪರೆಯು ಬಹುಮುಖವಾಗಿ ವಿಸ್ತೃತ ವಾಯಿತು.

ಈ ಪರಂಪರೆಯು ಶ್ರೀಮನ್ನಾರಾಯಣಯತೀಶ್ವರರ ಮೂಲಕ ಬಳ್ಳಾರಿಯ ಪ್ರಾಂತದಲ್ಲಿ ವಿಶೇಷವಾಗಿ ಪ್ರಕಾಶಿಸಲ್ಪಟ್ಟು ಕನ್ನಡನಾಡಿನಲ್ಲಿ ಹರಿಯಿತು. ಕೀರ್ತಿಶಾಲಿಗಳಾದ ಶ್ರೀ ನರಹರಿ ಸದ್ಗುರುಗಳು ಇದಕ್ಕೆ ಮುಖ್ಯ ಕಾರಣಪುರುಷರಾದರು. ಸಂಸ್ಕೃತಭಾಷಾ ಪ್ರಚುರವಾದ ವೇದಾಂತ ದರ್ಶನವನ್ನು ಕನ್ನಡನಾಡಿನ ಸಾಮಾನ್ಯಜನತೆಗಾಗಿ ತಿಳಿಗನ್ನಡದಲ್ಲಿ ಬೋಧಿಸುತ್ತ, ಬಹುಜನರ ಜ್ಞಾನತೃಷೆಯನ್ನು ಇವರು ತಣಿಸಿದರು. ಆಂಧ್ರದೇಶದವರಿಗಾಗಿ ತೆಲುಗುಭಾಷೆಯಲ್ಲಿ ವೇದಾಂತವನ್ನು ಉಪದೇಶಿಸಿದರು. ಆಂಧ್ರದೇಶದಲ್ಲಿ ಮತ್ತು ಕನ್ನಡನಾಡಿನಲ್ಲಿ ಅವರ ಶಿಷ್ಯವೃಂದವು ಅಧಿಕವಾಗಿದೆ. 'ಸರ್ವಂ ಬ್ರಹ್ಮಮಯಂ ಜಗತ್' ಎಂಬ ಅಧ್ಯಾತ್ಮ ತತ್ತ್ವವನ್ನರಿಯುವುದು ಅತ್ಯಂತ ಕಠಿನವಾದುದು. ತರ್ಕಕರ್ಕಶವಾದ ಜಟಿಲಭಾಷೆಯಿಂದ ಅದನ್ನು ಪರಿಷ್ಕರಿಸುತ್ತ ಹೋದರೆ, ಪ್ರಮೇಯವಾದ ತತ್ತ್ವವು ಹಿಂದುಳಿದು ವೇದಾಂತವು ಮತ್ತಷ್ಟು ಕಠಿನವಾಗಿ ದುರ್ಬೋಧವಾಗುತ್ತದೆ. ಮುಮುಕ್ಷುಗಳಿಗೆ ಅದರಿಂದ ಯಾವ ಪ್ರಯೋಜನವೂ ದೊರೆಯದು. ವಾದಕುತೂಹಲಿಗಳಿಗೆ ವಾಗ್ವೈಖರಿಯನ್ನು ಮೆರೆಸಲು ಮಾತ್ರ ಪುಷ್ಕಳವಾದ ಅವಕಾಶವು ದೊರೆಯುತ್ತದೆ. ಅದರಿಂದ ಶಾಸ್ತ್ರಾರಣ್ಯದಲ್ಲಿ ದಾರಿ ತಪ್ಪಿಹೋಗುವ ಸಂಭವವೇ ಹೆಚ್ಚು. ಶಮ, ದಮ, ತಿತಿಕ್ಷೆ ಮುಂತಾದ ಉನ್ನತಗುಣಗಳಿಗೆ ಬದಲಾಗಿ, ಆತ್ಮೋದ್ಧಾರಕ್ಕೆ ಅಡ್ಡಿಯಾಗುವ ಅವಿನಯ, ಔದ್ಧತ್ಯ, ಅಹಂಕಾರ ಮುಂತಾದ ರಾಜಸ ಗುಣಗಳು ಬೆಳೆಯುವ ಸಂಭವವೇ ಅಧಿಕ. ಇಂತಹ ಕರ್ಕಶಮತಿಗಳು ವೇದಾಂತದಿಂದ ಯಾವ ಉಪಯೋಗವನ್ನು ಪಡೆದಾರು? ಇವರಿಂದ ಜನರು ಯಾವ ಬಗೆಯಲ್ಲಿ ಕೃತಕೃತ್ಯರಾದಾರು?

ಈ ವಿಷಯವನ್ನು ಮನಗಂಡು ಶ್ರೀ ನರಹರಿಗುರುಗಳು ತರ್ಕದ ಜಾಡನ್ನು ದೂರಮಾಡಿದರು. ಪರಮತಖಂಡನವೇ ಮೊದಲಾದ ಉದ್ವೇಗ ಕಾರಕ ವಿವಾದಗಳಿಗೆ ಅವರು ಪ್ರವೇಶಿಸಲೇ ಇಲ್ಲ. ನಮ್ಮ ಮನೆಯನ್ನು ಚೊಕ್ಕಟವಾಗಿರಿಸಿಕೊಂಡು, ಕಸವಿದ್ದರೆ ಕಸದ ಬುಟ್ಟಿಗೆ ಎಸೆಯಬೇಕೇ ಹೊರತು, ಅದನ್ನು ಪಕ್ಕದವರ ಮನೆಗೆ ತೂರಿಸುವುದು ಸೌಜನ್ಯವಲ್ಲವೆಂದು ಅವರು ಭಾವಿಸಿದ್ದರು. ಶ್ರೀ ನರಹರಿಗುರುಗಳು ಮುಖ್ಯವಾದ ಪ್ರಮೇಯ

ವನ್ನು ತಿಳಿಯಾದ ಭಾಷೆಯಲ್ಲಿ ವಿವಿಧ ದೃಷ್ಟಾಂತಗಳಿಂದ ವಿವರಿಸುತ್ತ, ಸಣ್ಣ ಸಣ್ಣ ಕಥೆಗಳಿಂದ ಮನದಟ್ಟುವಂತೆ ತಿಳಿಸುತ್ತಹೋದರು. ವೇದಾದಿ ಶಾಸ್ತ್ರಗಳಲ್ಲಿಯೂ ವಿವಿಧ ಪುರಾಣಗಳಲ್ಲಿಯೂ ಅವರಿಗೆ ಅಪಾರವಾದ ಪಾಂಡಿತ್ಯವಿತ್ತು. ಆಗಮಗಳನ್ನೂ ತಂತ್ರಶಾಸ್ತ್ರಗಳನ್ನೂ ಅರಿತಿದ್ದರು. ಅವೆಲ್ಲ ಗ್ರಂಥಗಳ ಮುಖ್ಯ ತಾತ್ಪರ್ಯವು ಅದ್ವೈತದ ಕಡೆಗೇ ಎಂಬುದನ್ನು ಹೃದಯಂಗಮವಾಗಿ ಸಕಲಸಮ್ಮತವಾಗುವಂತೆ ಬಿಡಿಸಿ ಹೇಳುವ ಅದ್ಭುತ ವಾದ ವಾಕ್‌ಶಕ್ತಿ ಅವರಲ್ಲಿತ್ತು. ಅವರ ಪ್ರವಚನವನ್ನು ಶಿಷ್ಯರು ಮಂತ್ರಮುಗ್ಧರಾದಂತೆ ಏಕಚಿತ್ತತೆಯಿಂದ ಆಲಿಸುತ್ತಿದ್ದರು.

"ಮಾನವನ ದೃಷ್ಟಿಯು ಅಂತರ್ಮುಖವಾಗಿ ಬ್ರಹ್ಮವಸ್ತುವನ್ನು ಅರಸಬೇಕು. ಆತ್ಮವು ತನ್ನಲ್ಲಿದೆ. ವಾಸ್ತವವಾಗಿ 'ನಾನು' ಎಂಬುದೇ ಆತ್ಮ. ಬಾಹ್ಯದೃಷ್ಟಿಯಿಂದ ಅದನ್ನು ಕಾಣಲು ಶಕ್ಯವಲ್ಲ. ಹೊರಗಿನಿಂದ ಪಡೆಯಬೇಕಾದ ವಸ್ತು ಅದಲ್ಲ. ಹೊರಗೆ ಕಾಣುವುದೆಲ್ಲವೂ ಅನಾತ್ಮವಸ್ತು. ಅದನ್ನೆಷ್ಟು ವಿಚಾರಿಸಿದರೆ ತಾನೇ ಏನು ಫಲ? ಅನಂತವಾದ ಬ್ರಹ್ಮಾಂಡ ವನ್ನು ತಿಳಿಯುವುದು ಎಂದಿಗೂ ಸಾಧ್ಯವಲ್ಲ. ಬ್ರಹ್ಮಾಂಡದಲ್ಲಿರುವ ಈ ಪಿಂಡಾಂಡದಲ್ಲಿ (ದೇಹದಲ್ಲಿ) ಸಕಲವೂ ಅಡಗಿದೆ. ಚಿನ್ನದ ಒಂದು ಚೂರನ್ನು ಸರಿಯಾಗಿ ತಿಳಿದುಕೊಂಡರೆ ಜಗತ್ತಿನಲ್ಲಿರುವ ಚಿನ್ನದ ರಾಶಿ ಯನ್ನೇ ತಿಳಿದುಕೊಂಡಂತಲ್ಲವೆ? ಚಿನ್ನದ ರಾಶಿಯಲ್ಲಿ ಘಟಕವಾದ ವಸ್ತುವೇ ಚಿನ್ನದ ಚೂರಿನಲ್ಲಿದೆ" ಎಂಬುದು ಅವರ ಬೋಧನೆಯ ಸಾರವಾಗಿತ್ತು.

ಪುರಾಣಗಳಲ್ಲಿರುವ ಕಥೆಗಳು ಆಧ್ಯಾತ್ಮಪರವಾದವು. ಪ್ರತಿಯೊಂದು ಕಥೆಯಲ್ಲಿಯೂ ಒಂದೊಂದು ತತ್ತ್ವವಡಗಿದೆ. ಸ್ಥೂಲವಾದ ಕಥೆಯನ್ನು ಕೇಳಿ 'ಅದು ಕಟ್ಟುಕಥೆ. ಅದರಲ್ಲಿ ತಿರುಳಿಲ್ಲ' ಎನ್ನುವುದು ಮೂರ್ಖತನ ವೆಂದು ಶ್ರೀಗುರುಗಳು ಹೇಳುತ್ತಿದ್ದರು. ಪುರಾಣಕಥೆಗಳನ್ನು ಜರಿಯುವ ಅಲ್ಪಮತಿಗಳ ಹೇಳಿಕೆಯನ್ನು ಅವರು ಒಪ್ಪುತ್ತಿರಲಿಲ್ಲ.

ಆ ಮಹಾತ್ಮರು ತಮ್ಮ ಮುಪ್ಪಿನಲ್ಲಿಯೂ ದೇಹಶ್ರಮವನ್ನು ಲೆಕ್ಕಿಸದೆ, ಹಗಲಿರುಳೂ ಆಧ್ಯಾತ್ಮಚಿಂತನೆಯಲ್ಲಿ ಮಗ್ನರಾಗಿ ಶಿಷ್ಯರಿಗೆ

ಬೋಧಿಸುತ್ತಿದ್ದರು. ಅವರ ಸನ್ನಿಧಿಯಲ್ಲಿ ಆತ್ಮವಿಚಾರವನ್ನು ಬಿಟ್ಟು ಇನ್ನೊಂದು ವಿಷಯದ ಚಿಂತನೆಗೆ ಅವಕಾಶವೇ ಇರಲಿಲ್ಲ. ಜ್ಞಾನಸಂಪಾದನೆಗೆ ಜಾತಿಭೇದವಾಗಲಿ ಸ್ತ್ರೀ-ಪುರುಷ ಎಂಬ ಲಿಂಗಭೇದವಾಗಲಿ ಅಡ್ಡಿಯಲ್ಲ ಎಂಬುದು ಅವರ ನಿಲುವಾಗಿತ್ತು.

ಶ್ರೀ ನರಹರಿಗುರುಗಳ ಜೀವನವೆಲ್ಲವೂ ಆತ್ಮಚಿಂತನ, ಜ್ಞಾನೋಪದೇಶಗಳಿಗೆ ಮೀಸಲಾಯಿತು. ಜ್ಞಾನೋಪದೇಶಕ್ಕೆ ಬೇಕಾದ ಸಾಮಗ್ರಿಯನ್ನು ಅವರು ವಿಪುಲವಾಗಿ ಸಂಪಾದಿಸಿದ್ದರು. ಜಾನಪದಗೀತೆಗಳಿಂದ ಹಿಡಿದು ಉಪನಿಷತ್ತುಗಳವರೆಗೆ ವಿಸ್ತೃತವಾದ ಪರಿಚಯವು ಅವರಿಗಿತ್ತು. ಅವರ ಜ್ಞಾನಭಂಡಾರದ ಸಂಗ್ರಹವು ಅದ್ಭುತವಾದುದು. ಎಂತಹ ವಿದ್ವಾಂಸರನ್ನಾದರೂ ತಲೆದೂಗಿಸುವಂತಹದು.

ಇಂತಹ ಮಹನೀಯರು ವಿದೇಹಮುಕ್ತರಾಗಿ ಬಹುಕಾಲವು ಸಂದು ಹೋದರೂ ಇವರ ದಿವ್ಯಸ್ಮೃತಿಯನ್ನು ಸ್ಥಿರಗೊಳಿಸುವ ವಿಶಿಷ್ಟವಾದ ಪ್ರಯತ್ನವು ತಕ್ಕಂತೆ ನಡೆಯಲಿಲ್ಲ. ಇವರ ಜೀವನದ ವಿಶೇಷ ಘಟನೆಗಳನ್ನು ಯಾರೂ ಸಂಗ್ರಹಿಸಲಿಲ್ಲ. ಪ್ರವಚನಕಾಲದಲ್ಲಿ ಶ್ರೀ ನರಹರಿಗುರುಗಳು ತಮ್ಮ ವೈಯಕ್ತಿಕ ವಿಷಯವನ್ನು ಹೇಳುತ್ತಲೇ ಇರಲಿಲ್ಲ. ಆದರೂ ಸಮಯೋಚಿತವಾಗಿ ಹೇಳಿದ ಒಂದೆರಡು ಮಾತುಗಳನ್ನೇ ಶಿಷ್ಯರು ನೆನಪಿನಲ್ಲಿಟ್ಟುಕೊಂಡರು. ಶ್ರೀ ಸದ್ಗುರುಗಳ ತನೂದ್ಭವರೂ ಶಿಷ್ಯರೂ ಆದ ಶ್ರೀ ಲಕ್ಷ್ಮೀನರಸಿಂಹಶಾಸ್ತ್ರಿಗಳು ತಮ್ಮ ಪಿತೃವರ್ಯರ ಗುರುಪರಂಪರೆಯನ್ನೂ ಹಿಂದಿನ ಒಂದೆರಡು ಸಂದರ್ಭಗಳನ್ನೂ ತಿಳಿಸಿದ್ದುಂಟು. ತಿಳಿದಷ್ಟೇ ವಿಷಯವನ್ನು ಸ್ಪಷ್ಟವಾಗಿ ಗ್ರಂಥರೂಪದಲ್ಲಿಡುವುದು ಆವಶ್ಯಕವೆಂದು ಶಿಷ್ಯವೃಂದದಲ್ಲಿ ಆಕಾಂಕ್ಷೆ ಉದಯಿಸಿತು. ಈ ಸಮಯದಲ್ಲಿ ಶ್ರೀ ನರಹರಿಗುರುಗಳ ಪರಮಭಕ್ತರೂ ಶ್ರೀಕ್ಷೇತ್ರಗೋಕರ್ಣದ ಮಾಸಗೇರಿವಾಸಿಗಳೂ ಆದ ವೇ|| ಬ್ರ|| ಶ್ರೀ|| ರಾಮಕೃಷ್ಣಭಟ್ಟರು ನನ್ನೊಡನೆ ಈ ವಿಷಯವನ್ನು ಪ್ರಸ್ತಾವಿಸಿದರು. ಶ್ರೀಗುರುಗಳ ಪರಂಪರಾ ಚರಿತೆಯೊಂದನ್ನು ಬರೆಯಬೇಕೆಂದೂ, ಅದು ಸಂಸ್ಕೃತ ಶ್ಲೋಕಗಳ ರೂಪದಲ್ಲಿದ್ದರೆ ಉತ್ಕೃಷ್ಟವೆಂದೂ, ಭಕ್ತಜನರ ಅನುಸಂಧಾನಕ್ಕೆ ಉಪಯುಕ್ತವಾಗುವುದೆಂದೂ ಹೇಳಿದರು. ಅಲ್ಲದೆ ಆ ಗ್ರಂಥವನ್ನು ನಾನೇ ರಚಿಸಬೇಕೆಂದೂ ಸೂಚಿಸಿದರು. ಅವರ

ಆದೇಶದ ಫಲವಾಗಿ ಈ ಗ್ರಂಥವು ಪ್ರಕಾಶಕ್ಕೆ ಬಂದಿತು. ಸಂಸ್ಕೃತಭಾಷೆಯನ್ನು ತಿಳಿಯದವರ ಸೌಕರ್ಯಕ್ಕಾಗಿ ಕನ್ನಡ ಅನುವಾದವನ್ನು ಬರೆದು ಸೇರಿಸಲಾಯಿತು.

ಶ್ರೀ ನರಹರಿಗುರುಗಳ ಪೌತ್ರರೂ ಗುರುಸ್ಥಾನೀಯರೂ ಆದ ಶ್ರೀ ಸಿಂಹಾದ್ರಿಶಾಸ್ತ್ರಿಗಳು ಹಸ್ತಪ್ರತಿಯನ್ನು ಪರಿಶೀಲಿಸಿ, ಇದನ್ನು ಮುದ್ರಿಸಲು ಅನುಮತಿಯನ್ನಿತ್ತರು. ನನ್ನ ಚಿಕ್ಕಪ್ಪನವರ ಪುತ್ರರೂ ಗುರುಪರಂಪರೆಯ ಶಿಷ್ಯರೂ ಆದ ಶ್ರೀ ಎನ್. ಶ್ರೀಪತಿಯವರು ಮುದ್ರಣದ ವೆಚ್ಚವನ್ನು ವಹಿಸಿಕೊಳ್ಳಲು ಮುಂದಾದರು. ಶ್ರೀ ಗುರುಕೃಪೆಯಿಂದ ಈ ಗ್ರಂಥವು ಬೆಳಕನ್ನು ಕಂಡಿತು.

ನಾನು ಬಾಲ್ಯದಲ್ಲಿ ಶ್ರೀ ನರಹರಿಗುರುಗಳನ್ನು ಸಂದರ್ಶಿಸಿದ್ದೆನು. ನನ್ನ ಪೂಜ್ಯತಂದೆಯವರ ಪ್ರೇರಣೆಯಿಂದ ಗುರುಗಳ ಕೆಲವು ಪ್ರವಚನಗಳನ್ನು ಕೇಳಿದ್ದುಂಟು. ಇಷ್ಟೇ ನನಗೊದಗಿದ ಪುಣ್ಯಾವಕಾಶ. ಶ್ರೀ ಲಕ್ಷ್ಮೀನರಸಿಂಹಗುರುಗಳನ್ನು ನಾನು ಬಲ್ಲೆ.

ಇದು ಶ್ರೀ ಗುರುಚರಿತೆಯನ್ನು ಗ್ರಂಥಸ್ಥಗೊಳಿಸಬೇಕೆಂದು ಮಾಡಿದ ಒಂದು ಚಿಕ್ಕಪ್ರಯತ್ನ. ಇದರ ನ್ಯೂನತೆಯ ಅರಿವು ನನಗಿದೆ. ಚರಿತ್ರೆಗೆ ಸಂಬಂಧಿಸಿದ ವಸ್ತುಸಾಮಗ್ರಿ ಅತ್ಯಂತಪರಿಮಿತ. ನನಗೆ ವಿಶ್ವಾಸಾರ್ಹವಾಗಿ ತಿಳಿದುಬಂದ ವಿಷಯವನ್ನು ಇದರಲ್ಲಿ ವರ್ಣಿಸಲಾಗಿದೆ. ಚಾರಿತ್ರಿಕವಾದ ಹೆಚ್ಚಿನ ಅಂಶಗಳನ್ನು ಬಲ್ಲವರು ತಿಳಿಸಿದರೆ, ಮುಂದಿನ ಮುದ್ರಣದಲ್ಲಿ ಸೇರಿಸಬಹುದು. ನ್ಯೂನತೆಗಳನ್ನು ತಿಳಿಸಿದಲ್ಲಿ ತಿದ್ದಿಕೊಳ್ಳಬಹುದು. ಈ ಹೊತ್ತಿಗೆಯ ಪ್ರಕಟನೆಗೆ ನೆರವಾದವರೆಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ. ಅವರೆಲ್ಲರನ್ನೂ ಸದ್ಗುರುವು ಅನುಗ್ರಹಿಸಲೆಂದು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಬೆಂಗಳೂರು
ಸೌಮ್ಯ ಸಂ|| ಶ್ರಾವಣೇ ಸೌಮ್ಯವಾರ
ತಾ|| ೨೭-೮-೧೯೬೯

ಸಜ್ಜನವಿಧೇಯ
ಲೇಖಕ

ಮಂಗಳ ಶ್ಲೋಕಗಳು

ಓಂ ನಾರಾಯಣಂ ಪದ್ಮಭುವಂ ವಸಿಷ್ಠಂ
ಶಕ್ತಿಂ ಚ ತತ್ಪುತ್ರಪರಾಶರಂ ಚ |
ವ್ಯಾಸಂ ಶುಕಂ ಗೌಡಪದಂ ಮಹಾಂತಂ
ಗೋವಿಂದಯೋಗೀಂದ್ರಮಥಾಸ್ಯ ಶಿಷ್ಯಮ್ || ೧

ಶ್ರೀ ಶಂಕರಾಚಾರ್ಯಮಥಾಸ್ಯ ಪದ್ಮ-
ಪಾದಂ ಚ ಹಸ್ತಾಮಲಕಂ ಚ ಶಿಷ್ಯಮ್ |
ತಂ ತ್ರೋಟಕಂ ವಾರ್ತಿಕಕಾರಮನ್ಯಾನ್
ಅಸ್ಮದ್ಗುರೂನ್ ಸಂತತಮಾನತೋಽಸ್ಮಿ || ೨

ಶ್ರುತಿಸ್ಮೃತಿಪುರಾಣಾನಾಮಾಲಯಂ ಕರುಣಾಲಯಮ್ |
ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಮ್ || ೩

ಶಂಕರಂ ಶಂಕರಾಚಾರ್ಯಂ ಕೇಶವಂ ಬಾದರಾಯಣಮ್ |
ಸೂತ್ರಭಾಷ್ಯಕೃತೌ ವಂದೇ ಭಗವಂತೌ ಪುನಃ ಪುನಃ || ೪

ಈಶ್ವರೋ ಗುರುರಾತ್ಮೇತಿ ಮೂರ್ತಿಭೇದಾದ್ವಿಭಾಗಿನೇ |
ವ್ಯೋಮವದ್ವ್ಯಾಪ್ತದೇಹಾಯ ದಕ್ಷಿಣಾಮೂರ್ತಯೇ ನಮಃ || ೫

*

ನಿತ್ಯಾನಂದಾಯ ದತ್ತಾಯ ನಿರ್ಮಲಾಯ ಚಿದಾತ್ಮನೇ |
ಜ್ಞಾನೋತ್ತಮಾಯ ಸತ್ಯಾಯ ತಸ್ಮೈ ಶ್ರೀ ಗುರವೇ ನಮಃ || ೬

ಹಿಮಾಲಯಗಿರೀಂದ್ರಸ್ಥಃ ಸಮಾಶ್ರಿತಗುಣಾಶ್ರಯಃ |
ನಿರ್ಗುಣೋ ನಿರ್ವಿಕಲ್ಪಶ್ಚ ನಾರಾಯಣಯತೀಶ್ವರಃ || ೭

ತಸ್ಯ ಹಸ್ತಾಬ್ಜಸಂಜಾತಃ ಶ್ರೀನಿವಾಸಾಖ್ಯದೇಶಿಕಃ |
ತಸ್ಯಾಂತೇವಾಸಿಸರ್ವಜ್ಞೋ ಲಕ್ಷ್ಮಣಾಖ್ಯಗುರೂತ್ತಮಃ || ೮

ಶ್ರೀಮಲ್ಲಕ್ಷ್ಮಣಯೋಗಿಪುಂಗವಕರಾಬ್ಜಾದುದ್ಗತಂ ಸದ್ದ್ವಿಜಂ
ಸತ್ಯಾಸತ್ಯವಿಚಾರಣೈಕನಿಪುಣಂ ಸಚ್ಚಿತ್ಸುಖೋದ್ಬೋಧಕಮ್ ।
ಹೃತ್ಪದ್ಮೇ ಲಸಿತಂ ವರಾಭಯಕರಂ ಚೋಂಕಾರಪೀಠಸ್ಥಿತಂ
ಶ್ರೀರಾಯಾದ್ರಿನಿವಾಸಿನಂ ನರಹರಿಂ ಶ್ರೀಮದ್ಗುರುಂ ಸಂಶ್ರಯೇ ॥ ೯

ನೃಹರೇಃ ಕರಸಂಜಾತಂ ಲಕ್ಷ್ಮೀನೃಹರಿದೇಶಿಕಮ್ ।
ಜ್ಞಾನವಿಜ್ಞಾನದಾತಾರಂ ಗುರುಂ ಭಕ್ತ್ಯಾ ಭಜಾಮ್ಯಹಮ್ ॥ ೧೦

ಲಕ್ಷ್ಮೀನೃಸಿಂಹಗುರುರಾಜಕರಾಬ್ಜಜಾತಂ
ಸತ್ಸಂಪ್ರದಾಯಸಮವಾಪ್ತಸಮಸ್ತವಿದ್ಯಮ್ ।
ಅಧ್ಯಾತ್ಮನಿಷ್ಠಮಮಲಂ ಪರಿಶುದ್ಧಚಿತ್ತಂ
ಸಿಂಹಾದ್ರಿನಾಮಕಗುರುಂ ಪ್ರಣತೋಽಸ್ಮಿ ನಿತ್ಯಮ್ ॥ ೧೧

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥ ೧೨

ಯದಜ್ಞಾನತೋ ಭಾತಿ ವಿಶ್ವಂ ಸಮಸ್ತಂ
ವಿನಷ್ಟಂ ಚ ಸದ್ಯೋ ಯದಾತ್ಮಪ್ರಬೋಧೇ |
ಮನೋವಾಗತೀತಂ ವಿಶುದ್ಧಂ ವಿಮುಕ್ತಂ
ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ ||

ಶ್ರೀಃ

ಶ್ರೀ ಗುರುಪರಂಪರಾಚರಿತಮ್

ಪ್ರಣಮ್ಯ ಪರಮಾತ್ಮಾನಂ ನಿಃಶ್ರೇಯಸಕರಂ ವಿಭುಮ್ ।
ಮುಮುಕ್ಷೂಣಾಂ ಹಿತಾರ್ಥಾಯ ವಕ್ಷ್ಯೇ ಗುರುಪರಂಪರಾಮ್ ॥ ೧

ಅಸ್ತಿ ಕೃಷ್ಣಾನದೀತೀರೇ ರಮಣೀಯವನಾಕುಲಮ್ ।
ಗದ್ವಾಲಾಭಿಧಸಂಸ್ಥಾನಂ ಸಜ್ಜನೈಃ ಪರಿಶೋಭಿತಮ್ ॥ ೨

ಸತ್ಯಸಂಧೋ ನೃಪಃ ಕಶ್ಚಿತ್ ಶಶಾಸ ವಸುಧಾಮಿಮಾಮ್ ।
ಜಾತ್ಯಾ ಚತುರ್ಥವರ್ಣೋಽಪಿ ಗುಣರತ್ನಮಹೋದಧಿಃ ॥ ೩

ಬಭೂವ ತಸ್ಯ ನೃಪತೇಃ ಸರ್ವಶಾಸ್ತ್ರವಿದಗ್ರಣೀಃ ।
ವಿಪ್ರಃ ಪುರೋಹಿತೋ ಧೀಮಾನ್ ಸದಾಚಾರರುಚಿಃ ಶುಚಿಃ ॥ ೪

ಶ್ರೀಃ

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।
ಗುರುಃ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

ಮೋಕ್ಷದಾತನೂ ಸರ್ವವ್ಯಾಪಕನೂ ಆದ ಪರಮಾತ್ಮನಿಗೆ ನಮಸ್ಕರಿಸಿ, ಮುಮುಕ್ಷುಗಳ ಹಿತಕ್ಕೋಸ್ಕರ ಗುರುಪರಂಪರಾಚರಿತೆಯನ್ನು ಹೇಳುವೆನು (೧). ಕೃಷ್ಣಾನದೀತೀರದಲ್ಲಿ 'ಗದ್ವಾಲ' ಎಂಬ ಹೆಸರಿನ ಸಂಸ್ಥಾನವುಂಟು. ಅದು ರಮಣೀಯವನಗಳಿಂದ ತುಂಬಿ ಸಜ್ಜನರಿಂದ ಶೋಭಿಸುತ್ತಿದೆ (೨). ಆ ರಾಜ್ಯವನ್ನು ಸತ್ಯಸಂಧನಾದ ಒಬ್ಬ ರಾಜನು ಆಳುತ್ತಿದ್ದನು. ಅವನು ಜನ್ಮದಿಂದ ಶೂದ್ರನಾಗಿದ್ದರೂ ರತ್ನಗಳಿಗೆ ಮಹಾಸಮುದ್ರವಿರುವಂತೆ, ಸದ್ಗುಣಗಳಿಗೆ ಆಕರನಾಗಿದ್ದನು (೩). ಆ ರಾಜನಿಗೆ ಧೀಮಂತನಾದ ಒಬ್ಬ ವಿಪ್ರನು ಪುರೋಹಿತನಾಗಿದ್ದನು. ಆತನು ಸರ್ವಶಾಸ್ತ್ರಗಳಲ್ಲಿಯೂ ಪಾರಂಗತನಾಗಿದ್ದನಲ್ಲದೆ ಸದಾಚಾರನಿಷ್ಠನೂ

ಧರ್ಮಕಾರ್ಯೇಷು ತೇನಾಯಂ ಪ್ರೇರ್ಯಮಾಣೋ ಮಹೀಪತಿಃ ।
ನಾತಿಚಕ್ರಾಮ ತದ್ವಾಣೀಂ ವೇಲಾಮಿವ ಮಹೋದಧಿಃ ॥ ೫

ಕೃಷ್ಯರ್ಥಂ ಖನತಾ ತೇನ ಪ್ರಾಪ್ತಂ ರಾಜ್ಞಾ ಧನಂ ಬಹು ।
ರಾಜನ್ವತೀ ಪ್ರಸನ್ನೇವ ರತ್ನಗರ್ಭಾ ವಸುಂಧರಾ ॥ ೬

ವೀಕ್ಷ್ಯ ತಚ್ಚಕಿತೋ ರಾಜಾ ಸಮಾಹೂಯ ಪುರೋಹಿತಮ್ ।
ನ್ಯವೇದಯತ ತದ್ವೃತ್ತಂ ವಿನಯಾನತಮಸ್ತಕಃ ॥ ೭

ಇದಂ ಭೂರಿ ವಸು ಪ್ರಾಪ್ತಂ ಕಿಂ ಕಾರ್ಯಂ ಭಗವನ್ನಿಹ ।
ಇತ್ಯೇತದ್ವಚನಂ ಶ್ರುತ್ವಾ ಸಮವೋಚತ್ ಪುರೋಹಿತಃ ॥ ೮

ರಾಜನ್ ಪ್ರತ್ಯಬ್ದಮೇತೇನ ಕುರು ವಿದ್ವತ್ಸಭಾಂ ಕ್ರಮಾತ್ ।
ಸಮಾಹ್ವಯ ಬಹೂನ್ ಶಾಸ್ತ್ರವಿದೋ ವಿವಿಧದೇಶತಃ ॥ ೯

ಪ್ರವರ್ತತಾಂ ಚ ವಾಕ್ಯಾರ್ಥಸ್ತರ್ಕವ್ಯಾಕರಣಾದಿಷು ।
ಸಂಮಾನಯ ಧನಂ ದತ್ವಾ ಸಮಸ್ತಾನ್ ಪಂಡಿತಾನ್ ನೃಪ ॥ ೧೦

ಶುಚಿಯಾದ ಮನಸ್ಸುಳ್ಳವನೂ ಆಗಿದ್ದನು (೪). ಆ ವಿಪ್ರನು ಧರ್ಮ ಕಾರ್ಯಗಳನ್ನು ನಡೆಸುವಂತೆ ರಾಜನನ್ನು ಪ್ರೇರಿಸಿದಾಗ, ಅದರಂತೆಯೇ ರಾಜನು ನಡೆದುಕೊಳ್ಳುತ್ತಿದ್ದನು. ಸಮುದ್ರವು ತನ್ನ ಮೇರೆಯನ್ನು ಮೀರದಂತೆ, ಆ ರಾಜನು ವಿಪ್ರನ ವಾಣಿಯನ್ನು ಎಂದಿಗೂ ಮೀರಿ ನಡೆಯುತ್ತಿರಲಿಲ್ಲ (೫). ಒಂದುಸಲ ಆ ಭೂಪಾಲನು ವ್ಯವಸಾಯಕ್ಕಾಗಿ ನೆಲವನ್ನು ಅಗೆಸುತ್ತಿರುವಾಗ ವಿಪುಲವಾದ ಐಶ್ವರ್ಯವು ದೊರೆಯಿತು. ಉತ್ತಮರಾಜನನ್ನು ಪಡೆದ ರತ್ನಗರ್ಭೆಯಾದ ಭೂದೇವಿಯು ಪ್ರಸನ್ನಳಾಗಿ ಆತನಿಗೆ ಅನುಗ್ರಹವನ್ನು ಮಾಡಿದಂತಾಯಿತು (೬). ಆಗ ರಾಜನು ಆಶ್ಚರ್ಯಚಕಿತನಾಗಿ, ತನ್ನ ಪುರೋಹಿತನಾದ ಆ ವಿಪ್ರನನ್ನು ಕರೆಸಿ ಈ ವೃತ್ತಾಂತವನ್ನು ವಿನಯದಿಂದ ನಿವೇದಿಸಿದನು (೭): " ಪೂಜ್ಯರೆ, ಅನಿರೀಕ್ಷಿತವಾಗಿ ನನಗೆ ವಿಪುಲವಾದ ಐಶ್ವರ್ಯವು ದೊರಕಿತು. ಇದನ್ನು ನಾನು ಹೇಗೆ ವಿನಿಯೋಗಿಸಲಿ ? " ಎಂದು ಕೇಳಿದನು. ಆಗ ಪುರೋಹಿತನು " ರಾಜ, ಈ ಧನದಿಂದ ಪ್ರತಿವರ್ಷವೂ ಒಂದೊಂದು ವಿದ್ವತ್ಸಭೆಯನ್ನು ನಡೆಸು. ವಿವಿಧ ದೇಶಗಳಿಂದ ದೊಡ್ಡದೊಡ್ಡ ವಿದ್ವಾಂಸರನ್ನು ಕರೆಸು (೮-೯). ತರ್ಕ, ವ್ಯಾಕರಣಾದಿ ಶಾಸ್ತ್ರಗಳಲ್ಲಿ ವಿಚಾರಗೋಷ್ಠಿಯು

ಅನೇನ ವಿಧಿನಾ ಲಬ್ಧಂ ವಸು ವ್ಯಾಪಾರಿತಂ ಯದಿ ।
ಸಂಪ್ರೀತೋ ಭಗವಾನ್ ನಿತ್ಯಂ ತವ ಶ್ರೇಯೋ ವಿಧಾಸ್ಯತಿ ॥ ೧೧

ಇತ್ಯೇತದ್ವಿಪ್ರವಚನಂ ರಾಜಾ ಸರ್ವಂ ಪ್ರಮಾಣಯನ್ ।
ಧರ್ಮವಿತ್ ಕಾರಯಾಮಾಸ ಪ್ರತ್ಯಬ್ದಂ ವಿದುಷಾಂ ಸದಃ ॥ ೧೨

ತತ್ರ ಮೇಧಾವಿನಾಮಗ್ರ್ಯೋ ವೇದವೇದಾಂತಪಾರಗಃ ।
ಸದ್ಧರ್ಮನಿರತಃ ಶ್ರೀಮಾನ್ ಸರ್ವಶಾಸ್ತ್ರಾರ್ಥಕೋವಿದಃ ॥ ೧೩

ಆಹಿತಾಗ್ನಿಃ ಶ್ರೀನಿವಾಸಶಾಸ್ತ್ರೀತಿ ಪ್ರಥಿತೋ ಭುವಿ ।
ವಿದುಷಾಂ ಸದಸೋ ನೇತಾಽಭವದ್ರಾಜನಿದೇಶತಃ ॥ ೧೪

ಪುಂಸಂತತಿವಿಹೀನೋಽಸೌ ಪೂರ್ವಕರ್ಮವಿಶೇಷತಃ ।
ಕನ್ಯಾಸ್ತು ವಿಧಿವತ್ ಸರ್ವಾಃ ಪತಿಗೇಹಂ ಪ್ರಪೇದಿರೇ ॥ ೧೫

ಗತೇ ಬಹುತಿಥೇ ಕಾಲೇ ಭಾರ್ಯಾಪ್ಯಸ್ಯ ದಿವಂಗತಾ ।
ಏಕಾಕೀ ವ್ಯಚರದ್ ಭೂಮೌ ತದಾ ಶಾಸ್ತ್ರಿಮಹೋದಯಃ ॥ ೧೬

ನಡೆಯಲಿ. ಸಭೆಗೆ ಬಂದಿರುವ ಸಮಸ್ತ ವಿದ್ವಾಂಸರಿಗೂ ಧನವನ್ನು ಕೊಟ್ಟು ಗೌರವಿಸು. ಈ ಧನವನ್ನು ನಾನು ಹೇಳಿದ ಮಾರ್ಗದಲ್ಲಿ ಉಪಯೋಗಿಸುವುದಾದರೆ, ಭಗವಂತನು ಪ್ರಸನ್ನನಾಗಿ, ನಿನಗೆ ಕಲ್ಯಾಣವನ್ನುಂಟುಮಾಡುವನು" ಎಂದು ಹೇಳಿದನು (೧೦-೧೧). ಧರ್ಮಜ್ಞನಾದ ಆ ರಾಜನು ಪುರೋಹಿತನ ಮಾತನ್ನು ಆದರಿಸಿ, ಪ್ರತಿವರ್ಷವೂ ವಿದ್ವತ್ಸಭೆಯನ್ನು ನಡೆಸಲಾರಂಭಿಸಿದನು (೧೨). ರಾಜನ ಸೂಚನೆಯಂತೆ, ಶ್ರೀನಿವಾಸ ಶಾಸ್ತ್ರಿಗಳೆಂದು ವಿಖ್ಯಾತರಾದ ಒಬ್ಬ ಪಂಡಿತರು ಪಂಡಿತಸಭೆಗೆ ಅಧ್ಯಕ್ಷರಾಗಿ ಕಾರ್ಯವನ್ನು ನಡೆಸುತ್ತಿದ್ದರು. ಶ್ರೀನಿವಾಸಶಾಸ್ತ್ರಿಗಳು ಮಹಾಮೇಧಾವಿಗಳು. ವೇದವೇದಾಂತಗಳಲ್ಲಿ ನಿಷ್ಣಾತರು. ಧರ್ಮನಿಷ್ಠರು. ಸರ್ವಶಾಸ್ತ್ರಗಳನ್ನೂ ಬಲ್ಲವರು ಮತ್ತು ಆಹಿತಾಗ್ನಿಗಳು (೧೩-೧೪). ಜನ್ಮಾಂತರದ ಕರ್ಮವಿಶೇಷದಿಂದ ಆ ಶಾಸ್ತ್ರಿಗಳಿಗೆ ಗಂಡುಸಂತಾನವಿರಲಿಲ್ಲ. ಹೆಣ್ಣುಮಕ್ಕಳೆಲ್ಲರಿಗೂ ಮದುವೆಯಾಗಲು, ಅವರು ತಮ್ಮ ತಮ್ಮ ಗಂಡಂದಿರ ಮನೆಗೆ ತೆರಳಿದರು (೧೫). ಹೀಗೆ ಬಹುಕಾಲವು ಕಳೆಯಲು, ಶಾಸ್ತ್ರಿಗಳ ಪತ್ನಿಯು ಸ್ವರ್ಗಸ್ಥಳಾದಳು. ಶಾಸ್ತ್ರಿಗಳು ಏಕಾಕಿಗಳಾಗಿ ಹೇಗೋ

ಬಾಂಧವಾಃ ಕಸ್ಯ ಕಾ ಭಾರ್ಯಾ ಕಾ ಮಾತಾ ಕಃ ಪಿತಾ ಸುತಃ ।
ಕಾಷ್ಠಾನೀವ ವಿಯುಜ್ಯಂತೇ ಸಂಸೃಜ್ಯಂತೇ ನದೀಜಲೇ ॥ ೧೭

ಬುದ್ಬುದಾನೀವ ಪಯಸಿ ಬಾಂಧವಾ ಹಿ ಯದೃಚ್ಛಯಾ ।
ಜಾಯಂತೇ ಚ ವಿಲೀಯಂತೇ ವಿದ್ವಾನತ್ರ ರಮೇತ ಕಃ ॥ ೧೮

ಇತಿ ಮತ್ವಾ ಬುಧಾಗ್ರ್ಯೋಽಸೌ ನೈವ ಶೋಕೇ ಮನೋ ದಧೌ ।
ಅರ್ಜಿತಂ ಸರ್ವಮೇವ ಸ್ವಂ ದೀನೇಭ್ಯೋ ವಿತತಾರ ಸಃ ॥ ೧೯

ಯಾ ತು ಸಂಪಾದಿತಾ ವಿದ್ಯಾ ಶ್ರಮೇಣ ಗುರುಸೇವಯಾ ।
ನ ಸಾ ಸ್ವಯಂ ವಿಲೀಯೇತೇತ್ಯಮನ್ಯತ ಬುಧಾಗ್ರಣೀಃ ॥ ೨೦

ಸಂಗೃಹ್ಯ ಶಿಷ್ಯಾನ್ ಬಹುಶೋ ಗುಣಪೂರ್ಣಾನ್ ನಯೋಜ್ಜ್ವಲಾನ್
ಅಧ್ಯಾಪಯಾಮಾಸ ಚಾತ್ಮಾ ಋಣಾದಾರ್ಷಾದ್ವಿಮೋಚಿತಃ ॥ ೨೧

ಕಾಲಯಾಪನೆಮಾಡುತ್ತಿದ್ದರು (೧೬). ಆ ಪಂಡಿತೋತ್ತಮರ ಮನಸ್ಸಿನಲ್ಲಿ ವೈರಾಗ್ಯವು ಉತ್ಪನ್ನವಾಯಿತು: “ಯಾರಿಗೆ ಯಾರು ಬಾಂಧವರು? ಪತ್ನಿಯೆಂದರೆ ಯಾರು? ತಾಯಿ ಯಾರು? ತಂದೆ ಯಾರು? ಮಗನು ಯಾರು? ನದೀಜಲದಲ್ಲಿ ಕಟ್ಟಿಗೆಯ ತುಂಡುಗಳು ತೇಲುತ್ತಬಂದು ಸೇರಿಕೊಳ್ಳುತ್ತವೆ. ಮತ್ತೆ ಅಗಲಿ ತಮ್ಮ ಪಾಡಿಗೆ ತೇಲಿಹೋಗುತ್ತವೆ (೧೭). ಅದರಹಾಗೆಯೇ ಬಂಧುಗಳು. ನೀರಿನಲ್ಲಿ ಗುಳ್ಳೆಗಳು ಎದ್ದು ಅಡಗುವಂತೆ, ಬಂಧುಗಳೆಂಬವರು ಹುಟ್ಟಿಕೊಳ್ಳುತ್ತಾರೆ. ತಾವಾಗಿಯೇ ಅಡಗಿಹೋಗುತ್ತಾರೆ. ಯಾವ ವಿದ್ವಾಂಸನು ಇದರಲ್ಲಿ ಆಸಕ್ತಿಯನ್ನಿಟ್ಟಾನು?” (೧೮). ಈ ರೀತಿಯಾಗಿ ದೃಢವಾದ ವೈರಾಗ್ಯವು ಉತ್ಪನ್ನವಾದ್ದರಿಂದ, ಶ್ರೀನಿವಾಸ ಶಾಸ್ತ್ರಿಗಳು ಸ್ವಲ್ಪವೂ ಶೋಕಿಸಲಿಲ್ಲ. ಅವರು ಸಂಪಾದಿಸಿದ್ದ ಧನವೆಲ್ಲವನ್ನೂ ದೀನರಾದವರಿಗೆ ಕೊಟ್ಟುಬಿಟ್ಟರು (೧೯). ಆದರೆ ಗುರುಸೇವೆಮಾಡಿ ಬಹುಶ್ರಮದಿಂದ ಸಂಪಾದಿಸಿದ ಯಾವ ವಿದ್ಯೆ ಇದ್ದಿತೋ, ಅದು ತಮ್ಮಲ್ಲಿಯೇ ಜೀರ್ಣವಾಗಬಾರದು, ಸರಿಯಾದ ಶಿಷ್ಯರಿಗೆ ಅದನ್ನು ಉಪದೇಶಿಸಬೇಕು ಎಂದು ಆ ವಿದ್ವಾಂಸರು ನಿಶ್ಚಯಿಸಿದರು (೨೦). ಅನಂತರ ಗುಣವಂತರೂ ವಿನಯಶಾಲಿಗಳೂ ಆದ ಬಹುಮಂದಿ ಶಿಷ್ಯರಿಗೆ ಪಾಠವನ್ನು ತಪ್ಪದೆ ಹೇಳಿಕೊಟ್ಟರು. ಹೀಗೆ ತಮ್ಮನ್ನು ಋಷಿಋಣದಿಂದ ವಿಮೋಚನೆ ಮಾಡಿಸಿ

ಶಿಷ್ಯೈರ್ಮಾಧುಕರೀಂ ವೃತ್ತಿಂ ಶ್ರಿತ್ವಾ ಭೈಕ್ಷಂ ಸಮಾಹೃತಮ್ ।
ಭುಕ್ತ್ವಾ ಚಿಕಿತ್ಸಯಾಮಾಸ ಕ್ಷುದ್ವ್ಯಾಧಿಂ ಸ ದ್ವಿಜೋತ್ತಮಃ ॥ ೨೨
ಪಾರ್ಥಾಯ ದತ್ತಾ ಯಾ ಗೀತಾ ಶ್ರೀಕೃಷ್ಣೇನ ಮಹಾತ್ಮನಾ ।
ಛಾತ್ರೇಭ್ಯೋ ವಿವೃತಾ ಸೇಯಂ ಭಾಷ್ಯಾದ್ಯಾಶ್ರಿತ್ಯ ವಿಸ್ತರಾತ್ ॥ ೨೩
ಸಾಹಿತ್ಯಂ ಶಬ್ದಶಾಸ್ತ್ರಂ ಚ ಮೀಮಾಂಸಾ ನ್ಯಾಯವಿಸ್ತರಃ ।
ಇತ್ಯಾದಿಶಾಸ್ತ್ರಸಂಘಾತೋ ಗೀತಾಮಾಶ್ರಿತ್ಯ ಬೋಧಿತಃ ॥ ೨೪
ಶಿಷ್ಯಾನಧ್ಯಾಪಯನ್ ಧೀಮಾನ್ ಬ್ರಹ್ಮತತ್ತ್ವಮನುಸ್ಮರನ್ ।
ಶ್ರೇಯಃ ಸರ್ವಸ್ಯ ಲೋಕಸ್ಯ ಕಾಂಕ್ಷನ್ ಕಾಲಂ ನಿನಾಯ ಸಃ ॥ ೨೫
ಪಾಠಪ್ರವಚನಂ ಸರ್ವಂ ನಗರಸ್ಥಸುರಾಲಯೇ ।
ಪ್ರಾವರ್ತತ ಪ್ರತಿದಿನಂ ಯಥಾಕಾಲಂ ಯಥಾವಿಧಿ ॥ ೨೬
ಏವಂ ಸ್ಥಿತೇ ತತೋ ದೈವಾತ್ ಸಮಭೂತ್ ಕಿಂಚಿದದ್ಭುತಮ್ ।
ಸರ್ವಲೋಕಹಿತಾರ್ಥಾಯ ವಕ್ಷ್ಯಾಮ್ಯೇತನ್ನಿಬೋಧತ ॥ ೨೭

ಕೊಂಡರು (೨೧). ಶಿಷ್ಯರು ಮಾಧುಕರೀವೃತ್ತಿಯಿಂದ ತರುತ್ತಿದ್ದ ಭಿಕ್ಷಾನ್ನವನ್ನೇ ಶ್ರೀನಿವಾಸಶಾಸ್ತ್ರಿಗಳು ಭುಜಿಸುತ್ತಿದ್ದರು. ಹಸಿವು ಎಂಬ ರೋಗಕ್ಕೆ ಆಹಾರಸೇವನೆಯು ಒಂದು ಚಿಕಿತ್ಸೆ ಎಂದು ತಿಳಿದಿದ್ದರು (೨೨). ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ಯಾವ ಭಗವದ್ಗೀತೆಯುಂಟೋ, ಅದನ್ನೇ ಮುಖ್ಯವಾಗಿ ಶಾಸ್ತ್ರಿಗಳು ಶಿಷ್ಯರಿಗೆ ಹೇಳಿಕೊಡುತ್ತಿದ್ದರು. ಭಾಷ್ಯಾದಿ ಗ್ರಂಥಗಳನ್ನು ಆಶ್ರಯಿಸಿ ಗೀತೆಯನ್ನು ವಿವರವಾಗಿ ಬೋಧಿಸುತ್ತಿದ್ದರು (೨೩). ಸಾಹಿತ್ಯ, ವ್ಯಾಕರಣ, ಮೀಮಾಂಸೆ, ತರ್ಕ-ಮೊದಲಾದ ಸಕಲ ಶಾಸ್ತ್ರಗಳ ಪ್ರಕ್ರಿಯೆಯನ್ನೂ ಭಗವದ್ಗೀತೆಯ ಪಾಠಕಾಲದಲ್ಲಿಯೇ ಸಂಯೋಜಿಸಿ ವಿವರಿಸುತ್ತಿದ್ದರು (೨೪). ಈ ರೀತಿಯಲ್ಲಿ ಆ ವಿದ್ವಾಂಸರು ಶಿಷ್ಯರಿಗೆ ಪಾಠಹೇಳುತ್ತ, ಬ್ರಹ್ಮತತ್ತ್ವವನ್ನು ಧ್ಯಾನಿಸುತ್ತ, ಸಮಸ್ತರಿಗೂ ಕಲ್ಯಾಣವಾಗಲೆಂದು ಹಾರೈಸುತ್ತ ಕಾಲವನ್ನು ಕಳೆಯುತ್ತಿದ್ದರು (೨೫). ಆ ನಗರದಲ್ಲಿದ್ದ ಒಂದು ದೇವಾಲಯದಲ್ಲಿ ಪ್ರತಿದಿನವೂ ಪಾಠಪ್ರವಚನಗಳು ಯಥಾಕಾಲದಲ್ಲಿ ಕ್ರಮವಾಗಿ ನಡೆಯುತ್ತಿದ್ದವು. ಹೀಗಿರಲು ದೈವವಶದಿಂದ ಒಂದು ಅದ್ಭುತವು ನಡೆಯಿತು. ಅದರಿಂದ ಸರ್ವಸಜ್ಜನರಿಗೂ ಹಿತವೇ

ಹಿಮಾಲಯಗಿರೌ ದಿವ್ಯೇ ತಾಪಸಾನಾಂ ಸಮಾಶ್ರಯೇ ।
ಬಭೂವುರ್ಯತಯಸ್ತತ್ತ್ವಚಿಂತಕಾ ಬ್ರಹ್ಮವಿತ್ತಮಾಃ ॥ ೨೮

ಸಂಪ್ರದಾಯವಿದಃ ಶಿಷ್ಟಾಃ ಸದಾಚಾರಪ್ರವರ್ತಕಾಃ ।
ಆತ್ಮಾರಾಮಾ ಜಿತಕ್ರೋಧಾಃ ಸರ್ವತ್ರ ಸಮದರ್ಶಿನಃ ॥ ೨೯

ಅಜ್ಞಾನಮೋಹಿತಂ ಲೋಕಮುದ್ಧರ್ತುಂ ಯತಯಃ ಕ್ರಮಾತ್ ।
ಅಮೀ ವಿಚೇರುರ್ಲೋಕೇಽಸ್ಮಿನ್ ಬೋಧಯಂತೋ ಜಗದ್ಧಿತಮ್ ॥

ತೇಷಾಮನ್ಯತಮೋ ಜ್ಞಾನೀ ನಾರಾಯಣಯತೀಶ್ವರಃ ।
ಪರ್ಯಾಯೇಣ ಚಚಾರಾಸೌ ಜ್ಯೋತಿಷಾಮಿವ ಚಾಂಶುಮಾನ್ ॥

ಯಥಾ ದಿವಿ ರವಿರ್ಧ್ವಾಂತಂ ನಾಶಯತ್ಯುದಿತೋಽನ್ವಹಮ್ ।
ತಥಾ ಯಾಯಾವರೋ ವಿದ್ವಾನಜ್ಞಾನಾಖ್ಯಂ ಮಹತ್ತಮಃ ॥ ೩೨

ಆಯಿತು. ಅದೇನೆಂಬುದನ್ನು ಈಗ ಹೇಳುವೆನು, ಆಲಿಸಿರಿ (೨೬-೨೭). ದಿವ್ಯವಾದ ಹಿಮಾಲಯಪರ್ವತವು ತಪಸ್ವಿಗಳಿಗೆ ಆಶ್ರಯವಾಗಿರುವುದು ಸರಿಯಷ್ಟೆ. ಅಲ್ಲಿ ಬ್ರಹ್ಮಜ್ಞಾನಿಗಳೂ ಭಗವತ್ತತ್ತ್ವವನ್ನು ಸದಾ ಮನನ ಮಾಡತಕ್ಕವರೂ ಆದ ಯತಿಗಳು ವಾಸವಾಗಿದ್ದರು (೨೮). ಅವರು ಗುರು ಸಂಪ್ರದಾಯವನ್ನು ಚೆನ್ನಾಗಿ ಬಲ್ಲವರು. ಶಾಸ್ತ್ರೋಕ್ತವಾದ ಮಾರ್ಗದಲ್ಲಿ ನಡೆಯತಕ್ಕವರು. ಸದಾಚಾರವನ್ನು ಪ್ರಚಾರಮಾಡಿ ಬೋಧಿಸತಕ್ಕವರು. ಆತ್ಮಚಿಂತನೆಯಲ್ಲಿ ಆನಂದಿಸತಕ್ಕವರು. ಕ್ರೋಧವನ್ನು ಜಯಿಸಿದವರು ಮತ್ತು ಸರ್ವತ್ರ ಬ್ರಹ್ಮದರ್ಶಿಗಳಾಗಿದ್ದವರು (೨೯). ಈ ಜಗತ್ತು ಅಜ್ಞಾನದಿಂದ ಮೋಹಿತವಾದುದನ್ನು ಕಂಡು, ಜನರಿಗೆ ಹಿತಕರವಾದ ಶ್ರೇಯೋಮಾರ್ಗವನ್ನು ಬೋಧಿಸಿ ಅವರನ್ನು ಉದ್ಧರಿಸಬೇಕೆಂಬ ಕಾರುಣ್ಯದಿಂದ ಆಗಾಗ ದೇಶದೊಳಗೆ ಬಂದು ತತ್ತ್ವವನ್ನು ಬೋಧಿಸುತ್ತಿದ್ದರು (೩೦). ಅವರಲ್ಲಿ ಶ್ರೀ ನಾರಾಯಣಯತೀಶ್ವರರೆಂಬ ಒಬ್ಬ ಜ್ಞಾನಿಗಳು ಒಮ್ಮೆ ಭರತಖಂಡದಲ್ಲಿ ಸಂಚರಿಸುತ್ತಿದ್ದರು. ಜ್ಯೋತಿಗಳಲ್ಲಿ ಆದಿತ್ಯನಿರುವಂತೆ, ಹಿಮಾಲಯದಲ್ಲಿದ್ದ ಯತಿಗಳಲ್ಲಿ ಅವರು ಪ್ರಧಾನರಾಗಿದ್ದರು (೩೧). ಸೂರ್ಯನು ಪ್ರತಿದಿನವೂ ಉದಯಿಸಿ ಲೋಕದ ಕತ್ತಲೆಯನ್ನು ಹೇಗೆ ಹೋಗಲಾಡಿಸುವನೋ, ಹಾಗೆ ಈ ಯತೀಶ್ವರರು ಲೋಕದ ಅಜ್ಞಾನವೆಂಬ

ಕದಾಚಿದಾಯಯೌ ಧೀಮಾನ್ ಯತ್ರ ಶಾಸ್ತ್ರಿಮಹೋದಯಃ ।
ಅಧ್ಯಾಪಯನ್ ಶಿಷ್ಯವರ್ಗಂ ಸಮಾಸ್ತಾಮುಂ ಸುರಾಲಯಮ್ ॥

ಪ್ರವಿಶ್ಯ ಚ ಯತಿಸ್ತತ್ರ ಸ್ವಾಸ್ತೀರ್ಯ ಸ್ವಂ ಮೃಗಾಜಿನಮ್ ।
ಉಪವಿಷ್ಟೋ ಬಭೌ ಬ್ರಹ್ಮಾ ತೇಜಸೇವಾಂಬುಜಾಸನೇ ॥ ೩೪

ಗೀತಾಯಾಂ ಪಂಚಮೇಽಧ್ಯಾಯೇ ತದಾ ಶಾಸ್ತ್ರಿಮಹೋದಯಃ ।
ಪಾಠಂ ಪ್ರಾವರ್ತಯದ್ವಿದ್ವಾನ್ ಸಭಾಷ್ಯಂ ಯುಕ್ತಿಪೂರ್ವಕಮ್ ॥

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥ ೩೬

ಅಷ್ಟಾದಶಮಿಮಂ ಶ್ಲೋಕಂ ಬೋಧಯನ್ನಾಸ್ತ ಪಂಡಿತಃ ।
ಭಾಷ್ಯಾರ್ಥೋ ವಿವೃತಸ್ತೇನ ವ್ಯಾಖ್ಯಾನಸಮಲಂಕೃತಃ ॥ ೩೭

ದೊಡ್ಡ ಕತ್ತಲೆಯನ್ನು ನಾಶಪಡಿಸುತ್ತ ಸಂಚರಿಸುತ್ತಿದ್ದರು (೩೨). ಹೀಗಿರಲು ಶ್ರೀನಿವಾಸಶಾಸ್ತ್ರಿಗಳು ಯಾವ ದೇವಾಲಯದಲ್ಲಿ ಕುಳಿತು ಶಿಷ್ಯರಿಗೆ ಪಾಠಪ್ರವಚನಗಳನ್ನು ಹೇಳಿಕೊಡುತ್ತಿದ್ದರೋ, ಅಲ್ಲಿಗೆ ಶ್ರೀ ನಾರಾಯಣಯತೀಶ್ವರರು ಒಂದು ದಿನ ಆಗಮಿಸಿದರು (೩೩). ಆ ಯತಿಗಳು ದೇವಾಲಯವನ್ನು ಪ್ರವೇಶಿಸಿ ಅಲ್ಲೊಂದು ಕಡೆ ತಮ್ಮ ಕೃಷ್ಣಾಜಿನವನ್ನು ಹಾಸಿ ಕುಳಿತುಕೊಂಡರು. ಕಮಲದಲ್ಲಿ ಕುಳಿತ ಬ್ರಹ್ಮದೇವನಂತೆ ಅವರು ತೇಜೋನಿಧಿಗಳಾಗಿ ವಿರಾಜಿಸುತ್ತಿದ್ದರು (೩೪). ಆಗ ಭಗವದ್ಗೀತೆಯ ಐದನೆಯ ಅಧ್ಯಾಯದಲ್ಲಿ ಶ್ರೀ ಶಾಸ್ತ್ರಿಗಳು ಪಾಠವನ್ನು ನಡೆಸುತ್ತಿದ್ದರು. ಅಲ್ಲಿರುವ ಶ್ಲೋಕಗಳನ್ನು ಶಾಂಕರಭಾಷ್ಯಸಮೇತವಾಗಿ ಯುಕ್ತಿಪೂರ್ವಕವಾಗಿ ವಿವರಿಸುತ್ತಿದ್ದರು (೩೫). "ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣ, ಗೋವು, ಆನೆ, ನಾಯಿ, ಚಂಡಾಲ-ಇವರೆಲ್ಲರಲ್ಲಿಯೂ ಪಂಡಿತರು ಸಮದರ್ಶಿಗಳಾಗಿರುತ್ತಾರೆ" ಎಂಬುದು ಆ ಸಂದರ್ಭದಲ್ಲಿ ವಿವರಿಸಲ್ಪಡುತ್ತಿದ್ದ ವಿಷಯವಾಗಿತ್ತು (೩೬). ಈ ಅಂಶವನ್ನು ಹೇಳುವ 'ವಿದ್ಯಾವಿನಯಸಂಪನ್ನೇ........' ಎಂಬ ಶ್ಲೋಕವು ಗೀತೆಯ ಐದನೆಯ ಅಧ್ಯಾಯದಲ್ಲಿ ಹದಿನೆಂಟನೆಯ ಶ್ಲೋಕವಾಗಿದೆ. ಇದನ್ನು ವಿದ್ವಾಂಸರಾದ ಶ್ರೀನಿವಾಸಶಾಸ್ತ್ರಿಗಳು ಭಾಷ್ಯವ್ಯಾಖ್ಯಾನಸಹಿತವಾಗಿ ವಿವರಿಸುತ್ತಿದ್ದರು

ವಿದುಷಃ ಸಮದರ್ಶಿತ್ತ್ವಂ ಶ್ರಮೇಣ ಪ್ರತ್ಯಪಾದಯತ್ ।
ಮನಸ್ತು ಶಾಸ್ತ್ರಿವರ್ಯಸ್ಯ ಸಂತೃಪ್ತಂ ನ ಕಥಂಚನ ॥ ೩೮

ವಿವೃಣ್ವನ್ ಶಿಷ್ಯಬೋಧಾರ್ಥಂ ಹೃದಯೇ ಸಂಶಯಂ ವಹನ್ ।
ಆಲೋಕಯತ ಧೀಮಂತಂ ಯತಿಂ ಬ್ರಾಹ್ಮಣಸತ್ತಮಃ ॥ ೩೯

ಯತಿಸ್ತು ಕಂಪಯನ್ ವಕ್ತ್ರಂ ಪದ್ಮಂ ವಾತೇರಿತಂ ಯಥಾ ।
ಚಂದ್ರಿಕಾಂ ವಿಕ್ಷಿಪನ್ ದಿಕ್ಷು ಮಂದಂ ಸಪದಿ ಸಿಷ್ಮಿಯೇ ॥ ೪೦

ಸಮಾಪ್ಯಾಧ್ಯಾಪನಂ ಶಾಸ್ತ್ರೀ ಸಸಾದ ವಿನಯಾನ್ವಿತಃ ।
ಯತಿಂ ಬ್ರಹ್ಮವಿದಗ್ರಣ್ಯಂ ತತ್ತ್ವಜಿಜ್ಞಾಸಯಾ ಪುನಃ ॥ ೪೧

ಕಥಮಾಸೀತ್ ಪ್ರವಚನಂ ಮದೀಯಮಿತಿ ಚೋದಿತಃ ।
ಪ್ರೋವಾಚ ಸಮ್ಯಗಿತ್ಯೇವ ಯತಿರ್ಮತಿಮತಾಂ ವರಃ ॥ ೪೨

---

(೩೭). ಜ್ಞಾನಿಯು ಸರ್ವರಲ್ಲಿಯೂ ಸಮದರ್ಶಿಯಾಗಿರುವನೆಂಬ ಅಂಶವನ್ನು ಶ್ರೀ ಶಾಸ್ತ್ರಿಗಳು ಬಹುಶ್ರಮದಿಂದ ಪ್ರತಿಪಾದಿಸಿದರು. ಆದರೂ ಅವರ ಮನಸ್ಸಿಗೆ ಸಂತೃಪ್ತಿಯಾಗಲಿಲ್ಲ (೩೮). ಶಿಷ್ಯರಿಗೆ ಬೇಕಾದಷ್ಟು ವಿವರಣೆಯನ್ನು ಕೊಟ್ಟರು. ಆದರೆ ತಮ್ಮ ಮನಸ್ಸಿನಲ್ಲಿ ಸಂಶಯವು ಉಳಿದೇ ಇತ್ತು! ಪಾಠ ಹೇಳುವಾಗ ಆ ಶಾಸ್ತ್ರಿಮಹೋದಯರು, ದೇವಾಲಯದಲ್ಲಿ ಬಂದು ಕುಳಿತಿದ್ದ ಧೀಮಂತರಾದ ಶ್ರೀ ನಾರಾಯಣಯತೀಶ್ವರರನ್ನು ಒಂದುಸಲ ಸಂಶಯಗ್ರಸ್ತರಾಗಿ ನೋಡಿದರು (೩೯). ಆಗ ಯತಿಗಳು, ಗಾಳಿಗೆ ಅಲ್ಲಾಡುವ ಕಮಲದಂತೆ, ತಮ್ಮ ಮುಖವನ್ನು ಒಮ್ಮೆ ಅಲ್ಲಾಡಿಸಿದರು. ಮೆಲ್ಲಗೆ ಮುಗುಳ್ನಗೆ ಬೀರಿದರು. ಸುತ್ತಲೂ ಬೆಳದಿಂಗಳನ್ನು ಬೀರಿದಂತಾಯಿತು. ಅನಂತರ ಶಾಸ್ತ್ರಿಗಳು ಪಾಠವನ್ನು ಮುಗಿಸಿ, ವಿನಯದಿಂದ ಯತಿಗಳ ಬಳಿಗೆ ಹೋದರು. ಶ್ರೇಷ್ಠರಾದ ಆ ಬ್ರಹ್ಮಜ್ಞಾನಿಗಳಲ್ಲಿ ತಮ್ಮ ಸಂಶಯವನ್ನು ಪರಿಹರಿಸಿಕೊಳ್ಳಬೇಕೆಂಬುದು ಅವರ ಉದ್ದೇಶವಾಗಿತ್ತು (೪೦-೪೧). ಶ್ರೀನಿವಾಸಶಾಸ್ತ್ರಿಗಳು ಆ ಯತಿಗಳನ್ನು ಕುರಿತು "ಮಾನ್ಯರೆ, ನನ್ನ ಭಾಷ್ಯಪ್ರವಚನವು ಹೇಗಿತ್ತು?" ಎಂದು ಕೇಳಿದರು. ಅದಕ್ಕೆ ಯತಿಗಳು "ಚೆನ್ನಾಗಿತ್ತು" ಎಂದಿಷ್ಟೇ ಉತ್ತರವನ್ನು ಕೊಟ್ಟರು

ಶಾಸ್ತ್ರೀ ತು ನ ತುತೋಷೈವ ಚಿತ್ತೇ ವ್ಯಾಕುಲತಾಂ ವಹನ್ ।
ಅಜ್ಞಾನಾದನೃತಂ ಕ್ವಾಪಿ ಕೀರ್ತಯಿತ್ವೇವ ಸಜ್ಜನಃ ॥ ೪೩

ಕಂಚಿತ್ಕಾಲಂ ವಿನೋದೇನ ಸಂಭಾಷ್ಯಾಸೌ ಯತೀಶ್ವರಃ ।
ನಿರ್ಯಯೌ ಸರ್ವತೋ ದಿಕ್ಷು ವಿಕಿರನ್ ಕಾಂತಿಮುಜ್ಜ್ವಲಾಮ್ ॥

ತದಾ ಬ್ರಹ್ಮಣಿ ಸಂನ್ಯಸ್ತಮನೋದೇಹೇಂದ್ರಿಯಃ ಶುಚಿಃ ।
ಶ್ರೀನಿವಾಸಾಭಿಧಃ ಶಾಸ್ತ್ರೀ ಪರಂ ವೈರಾಗ್ಯಮಾಶ್ರಿತಃ ॥ ೪೫

ಅನೇಕಜನ್ಮಸಂಸಿದ್ಧಿಕ್ಷಪಿತಾಖಿಲಕಲ್ಮಷಃ ।
ಸಾಧುಸಂಗಮಸಂಪ್ರಾಪ್ತಸ್ಫೀತಪುಣ್ಯಫಲೋದಯಃ ॥ ೪೬

ಸಂಸಾರಸಾಗರಭ್ರಾಂತಿಶ್ರಾಂತಿಶಾಂತಹೃದಾಶಯಃ ।
ಸಮಸ್ತವಸ್ತುವಿಸ್ತಾರಸ್ರಸ್ತಸಂಸರ್ಗನಿಃಸ್ಪೃಹಃ ॥ ೪೭

---

(೪೨). ಶಾಸ್ತ್ರಿಗಳಿಗೆ ಮಾತ್ರ ಸಮಾಧಾನವಾಗಲಿಲ್ಲ. 'ವಿದ್ಯಾವಿನಯ ಸಂಪನ್ನೇ....' ಎಂಬ ಶ್ಲೋಕವನ್ನು ನಾನು ಸರಿಯಾಗಿ ವಿವರಿಸಲಿಲ್ಲ ಎಂಬ ಚಿಂತೆ ಬಾಧಿಸುತ್ತಲೇ ಇತ್ತು. ಶಿಷ್ಟನಾದ ಸತ್ಪುರುಷನು ಅಜ್ಞಾನದಿಂದ ಸುಳ್ಳನ್ನು ಹೇಳಿಬಿಟ್ಟರೆ, ಅನಂತರ ತನ್ನಲ್ಲಿಯೇ ಅವನು ಹೇಗೆ ಪರಿತಪಿಸುವನೋ ಹಾಗೆ ಶ್ರೀನಿವಾಸಶಾಸ್ತ್ರಿಗಳು ಪರಿತಪಿಸತೊಡಗಿದರು (೪೩). ಆ ಯತೀಶ್ವರರು ಸ್ವಲ್ಪಕಾಲ ಶ್ರೀನಿವಾಸಶಾಸ್ತ್ರಿಗಳೊಡನೆ ಸರಸ ಸಲ್ಲಾಪವನ್ನು ನಡೆಸಿ, ಆಮೇಲೆ ದೇವಾಲಯದಿಂದ ಹೊರಟರು. ಅವರ ಸುತ್ತಲೂ ಉಜ್ಜ್ವಲವಾದ ತೇಜಸ್ಸು ಹರಡಿತ್ತು. ಶುದ್ಧಾತ್ಮರಾದ ಶ್ರೀನಿವಾಸ ಶಾಸ್ತ್ರಿಗಳ ಮನಸ್ಸು ದೇಹೇಂದ್ರಿಯಗಳೆಲ್ಲವೂ ಬ್ರಹ್ಮಚಿಂತನೆಗಾಗಿ ಅರ್ಪಿತವಾಗಿದ್ದವು. ಅವರಿಗೆ ನಿರತಿಶಯವಾದ ವೈರಾಗ್ಯ ಉಂಟಾಯಿತು (೪೪-೪೫). ಹಿಂದಿನ ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯಸಿದ್ಧಿಯಿಂದ ಅಖಿಲ ದುರಿತಗಳೂ ನಾಶವನ್ನೈದಿದ್ದವು. ಸಜ್ಜನಸಮಾಗಮದಿಂದ ಪುಣ್ಯಫಲೋದಯವು ವಿಸ್ತೃತವಾಯಿತು. ಸಂಸಾರಸಾಗರದಲ್ಲಿ ಅಲೆದಲೆದು ಉಂಟಾದ ಶ್ರಮದಿಂದ ಹೃದಯಗ್ರಂಥಿಯು ಬಿಗಿಯೂ ಸಡಿಲವಾಯಿತು. ಜಗತ್ತಿನ ಸಮಸ್ತವಸ್ತುಗಳಲ್ಲಿಯೂ ಆಸೆಯೂ ವಿರತಿಹೊಂದಿತು (೪೬-೪೭).

ಯಸ್ಮಿನ್ನಹನಿ ವೈರಾಗ್ಯಂ ತಸ್ಮಿನ್ನಹನಿ ನಿರ್ವ್ರಜೇತ್ ।
ಶ್ರುತ್ಯರ್ಥಂ ಮನಸಾ ಧ್ಯಾಯನ್ನನುವವ್ರಾಜ ತಂ ಯತಿಮ್ ॥ ೪೮

ಯತಿಃ ಪಶ್ಚಾದನಾಲೋಕ್ಯ ವ್ರಜನ್ನೇವ ಯಥಾಸುಖಮ್ ।
ವೈಖಾನದೀತಟಂ ಪ್ರಾಪ್ತೋ ಮಿಥಿಲಾನಗರಾದ್ಬಹಿಃ ॥ ೪೯

ತತ್ರ ಕಾಚಿದ್ಗುಹಾ ರಮ್ಯಾ ವಿವಿಕ್ತಸ್ಥಲಶೋಭಿನೀ ।
ತಸ್ಯಾ ದ್ವಾರಂ ಸಮಾಗಮ್ಯ ಪರಾವೃತ್ಯ ಸಿರೈಕ್ಷತ ॥ ೫೦

ಶಾಸ್ತ್ರಿಣಂ ದೃಢಸಂಕಲ್ಪಂ ಯತಿಪಾದಾಹಿತೇಕ್ಷಣಮ್ ।
ಸಮಾಯಾಂತಂ ವಿನೇಯಂ ತಂ ಗುರುಕಾರುಣ್ಯಕಾಂಕ್ಷಿಣಮ್ ॥ ೫೧

ವೀಕ್ಷ್ಯ ಕಿಂಚಿದನುಕ್ತ್ವೈವ ಪ್ರವಿಶ್ಯ ಗುರುರಾಡ್ಗುಹಾಮ್ ।
ಆತ್ಮಾರಾಮೋ ಯತಿಸ್ತಸ್ಥೌ ಸಮಾಧಾವಚಲೇ ಪುನಃ ॥ ೫೨

ಪದ್ಮಬಂಧೋ ಯಥಾ ಭೃಂಗಃ ಸೂರ್ಯೋದಯಮುದೀಕ್ಷತೇ ।
ಪದ್ಮಬಂಧಸ್ತಥಾ ಶಿಷ್ಯೋ ಗುರೂತ್ಥಾನಮುದೈಕ್ಷತ ॥ ೫೩

ಯಾವಾಗ ವೈರಾಗ್ಯ ಉಂಟಾಗುವುದೋ ಆಕ್ಷಣದಲ್ಲಿಯೇ ಪರಿವ್ರಾಜಕನಾಗಿ ಹೊರಡಬೇಕು 'ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್'- ಎಂಬ ಶ್ರುತಿವಾಕ್ಯಾರ್ಥವನ್ನು ಮನಸ್ಸಿಗೆ ತಂದುಕೊಂಡು, ಶ್ರೀನಿವಾಸ ಶಾಸ್ತ್ರಿಗಳು ಆ ಯತೀಶ್ವರರ ಹಿಂದೆಯೇ ಹೊರಟುಬಿಟ್ಟರು (೪೮). ಆ ಯತಿಗಳು ತಮ್ಮ ಹಿಂದೆ ಶಾಸ್ತ್ರಿಗಳು ಬರುವುದನ್ನು ಗಮನಿಸಲೇ ಇಲ್ಲ. ಅವರು ಮುಂದಕ್ಕೆ ಹೋಗುತ್ತ, ಮಿಥಿಲಾನಗರದ ಹೊರಗಿರುವ ವೈಖಾ ನದಿಯ ತೀರವನ್ನು ಸೇರಿದರು (೪೯). ಆ ನದೀತೀರದಲ್ಲಿ ಏಕಾಂತವಾದ ಒಂದು ಗುಹೆಯಿತ್ತು. ಯತೀಶ್ವರರು ಆ ಗುಹೆಯ ಬಾಗಿಲಿಗೆ ಹೋಗಿ ಹಿಂದಕ್ಕೆ ತಿರುಗಿ ನೋಡಿದರು. ಶಾಸ್ತ್ರಿಗಳು ದೃಢಸಂಕಲ್ಪದಿಂದ ಆ ಯತಿಗಳ ಪಾದದಲ್ಲಿಯೇ ನೆಟ್ಟ ದೃಷ್ಟಿಯುಳ್ಳವರಾಗಿ, ಗುರುಕಾರುಣ್ಯವನ್ನು ಬಯಸಿ ವಿನಯದಿಂದ ಬರುತ್ತಿದ್ದರು (೫೦-೫೧). ಗುರುರಾಜರೆನಿಸಿದ ಆ ಯತೀಶ್ವರರು ಶಾಸ್ತ್ರಿಗಳನ್ನು ನೋಡಿದರೂ ಒಂದು ಮಾತನ್ನೂ ಆಡಲಿಲ್ಲ. ನೇರವಾಗಿ ಗುಹೆಯನ್ನು ಪ್ರವೇಶಿಸಿ ಅಚಲವಾದ ಸಮಾಧಿಯಲ್ಲಿ ನಿಂತು ಆತ್ಮಧ್ಯಾನದಲ್ಲಿ ಮಗ್ನರಾದರು (೫೨). ತಾವರೆಯ ಕೋಶದಲ್ಲಿ ಸೆರೆಯಾದ

ಧ್ಯಾನನಿಷ್ಠೋ ಗುರುಸ್ತಸ್ಥೌ ಗುಹಾಯಾಮೇವ ತಾಂ ನಿಶಾಮ್ |
ಗುರುಕಾರುಣ್ಯಮೇವೇಚ್ಛನ್ ಶಿಷ್ಯೋ ಬಹಿರವಸ್ಥಿತಃ || ೫೪

ಪರೇದ್ಯುರುದಿತೇ ಸೂರ್ಯೇ ಮಧ್ಯಾಹ್ನೇ ಸಮುಪಸ್ಥಿತೇ |
ಸಂತಃ ಕೇಚಿದುಪಾಜಹ್ರುಃ ಕಿಂಚಿದನ್ನಂ ತದಂತಿಕಮ್ || ೫೫

ನ್ಯವೇದಯತ ಶಿಷ್ಯೋಽಸೌ ಗುರವೇಽನ್ನಮುಪಾಹೃತಮ್ |
ಯಾವನಾಲಂ ತದಾಲೋಕ್ಯ ಗುರುರ್ನೈಚ್ಛನ್ಮಹಾಮನಾಃ || ೫೬

ಅಭೋಜ್ಯಂ ತಾಮಸಂ ಹ್ಯನ್ನಂ ಕ್ಷಿಪ ನದ್ಯಾಮಿತೀರಿತಃ |
ಶಾಸ್ತ್ರೀ ಚಿಕ್ಷೇಪ ನದ್ಯಾಂ ತತ್ಸರ್ವಂ ಚಿತ್ತೇ ನ ವಿವ್ಯಥೇ || ೫೭

ತಥಾ ದಿನತ್ರಯೇ ತತ್ರ ಸರ್ವಂ ವೃತ್ತಂ ಯಥಾಕ್ರಮಮ್ |
ಕ್ಷುಧಾ ಪ್ರಪೀಡ್ಯಮಾನೋಽಪಿ ಶಾಸ್ತ್ರೀ ಸ್ಥಿರಮನಾ ಅಭೂತ್ || ೫೮

ದುಂಬಿಯು ಸೂರ್ಯೋದಯವನ್ನೇ ಹೇಗೆ ನಿರೀಕ್ಷಿಸುತ್ತಿರುವುದೋ, ಹಾಗೆ ಶಿಷ್ಯರಾಗಿ ಬಂದ ಶ್ರೀನಿವಾಸಶಾಸ್ತ್ರಿಗಳು ಪದ್ಮಬಂಧದಲ್ಲಿ ಕುಳಿತು ಗುರುಗಳು ಸಮಾಧಿಯಿಂದೇಳುವದನ್ನೇ ನಿರೀಕ್ಷಿಸುತ್ತಿದ್ದರು (೫೩). ಗುರುಗಳು ಧ್ಯಾನನಿಷ್ಠರಾಗಿ ಆ ರಾತ್ರಿಯನ್ನು ಗುಹೆಯಲ್ಲಿಯೇ ಕಳೆದರು. ಈ ಶಿಷ್ಯರು ಗುರುಕಾರುಣ್ಯವನ್ನು ಬಯಸುತ್ತ ಗುಹೆಯ ಹೊರಗೇ ಇದ್ದರು. ಮಾರನೆಯ ದಿನ ಸೂರ್ಯೋದಯವಾಯಿತು. ಮಧ್ಯಾಹ್ನದ ಹೊತ್ತಿಗೆ ಯಾರೋ ಕೆಲವರು ಸಜ್ಜನರು ಸ್ವಲ್ಪ ಆಹಾರವನ್ನು ಅವರಿಗೆ ತಂದುಕೊಟ್ಟರು (೫೪-೫೫). ಶ್ರೀ ಶಾಸ್ತ್ರಿಗಳು ಅದನ್ನು ಯತೀಶ್ವರರಿಗೆ ಸಮರ್ಪಿಸಿದರು. ಆದರೆ ಮಹಾತ್ಮರಾದ ಆ ಯತಿಗಳು 'ಅದು ಜೋಳದ ಅನ್ನ' ಎಂದು ಹೇಳಿ ಆಹಾರವನ್ನು ಸ್ವೀಕರಿಸಲಿಲ್ಲ (೫೬). 'ಅದು ತಾಮಸವಾದ ಆಹಾರ. ಅದನ್ನು ತಿನ್ನಬಾರದು. ನದಿಯಲ್ಲಿ ಎಸೆದುಬಿಡು' ಎಂದು ಹೇಳಿದರು. ಆಗ ಶಾಸ್ತ್ರಿಗಳು ಗುರ್ವಾಜ್ಞೆಯಂತೆ ಅದನ್ನು ನದಿಯಲ್ಲಿ ಎಸೆದುಬಿಟ್ಟರು. ಆಹಾರವು ತಪ್ಪಿಹೋಯಿತೆಂದು ಅವರಿಗೆ ಯಾವ ವ್ಯಥೆಯೂ ಆಗಲಿಲ್ಲ (೫೭). ಈ ರೀತಿಯಲ್ಲಿ ಮೂರು ದಿನಗಳವರೆಗೆ ನಡೆಯಿತು. ಪ್ರತಿದಿನವೂ ಆಹಾರವನ್ನು ನದಿಗೆ ಎಸೆಯಬೇಕಾಯಿತು. ಶಾಸ್ತ್ರಿಗಳಿಗೆ ಹಸಿವಿನ ಬಾಧೆ ಹೆಚ್ಚಾಯಿತು. ಆದರೂ ಅವರು ಸ್ಥಿರವಾದ

ಚತುರ್ಥದಿವಸೇ ಕಶ್ಚಿತ್ತಂಡುಲಾನ್ನಮುಪಾಹರತ್ ।
ತದಾ ತು ಯತಿವರ್ಯೋಽಸೌ ತತ್ ಸ್ವೀಕರ್ತುಂ ಮನೋ ದಧೌ ॥

ತದನ್ನಸ್ಯ ಚತುರ್ಥಾಂಶಂ ಜಲಜಂತುಭ್ಯ ಆಹರತ್ ।
ಭೂತೇಭ್ಯೋ ದೇವತಾಭ್ಯಶ್ಚ ಭಾಗದ್ವಯಮುಕಲ್ಪಯತ್ ॥ ೬೦

ಅವಶಿಷ್ಟೇ ಸ್ವಯಂ ಭುಕ್ತ್ವಾ ಕಿಂಚಿದನ್ಯದ್ ಯತೀಶ್ವರಃ ।
ವಿತತಾರ ವಿನೀತಾಯ ಶಿಷ್ಯಾಯ ಗುಣಶಾಲಿನೇ ॥ ೬೧

ಉಪಭುಜ್ಯ ತದೇವಾಸೌ ಭಕ್ತ್ಯಾ ಶಾಸ್ತ್ರಿಮಹೋದಯಃ ।
ಕ್ಷುದ್ರೋಗಸ್ಯ ಪ್ರತೀಕಾರಂ ಕಿಂಚಿತ್ ಕೃತ್ವಾ ತುತೋಷ ಸಃ ॥ ೬೨

ಶಿಷ್ಯೋಽಯಂ ದೃಢನಿಷ್ಠಾವಾನ್ ಭಕ್ತಿಮಾನ್ ಶ್ರದ್ಧಯಾನ್ವಿತಃ ।
ಕಾರುಣ್ಯಪಾತ್ರಮಿತ್ಯೇವಂ ನಿಶ್ಚಿಕಾಯ ಗುರುಸ್ತತಃ ॥ ೬೩

ಗುಹಾಸಮೀಪೇ ಸಂಫುಲ್ಲಾನ್ಯಾನಾಯ್ಯ ಕುಸುಮಾನಿ ಸಃ ।
ಶಿಷ್ಯೇಣ ಕಾರಯಾಮಾಸ ವಿಧಿವತ್ ಪಾದಪೂಜನಮ್ ॥ ೬೪

ಮನಸ್ಸಿನಿಂದ ಹಸಿವನ್ನು ಸಹಿಸಿಕೊಂಡಿದ್ದರು (೫೮). ನಾಲ್ಕನೆಯ ದಿವಸ ಒಬ್ಬ ಮಹನೀಯನು ಅಕ್ಕಿಯ ಅನ್ನವನ್ನು ತಂದೊಪ್ಪಿಸಿದನು. ಯತೀಶ್ವರರು ಆ ಅನ್ನವನ್ನು ಸ್ವೀಕರಿಸಲು ಒಪ್ಪಿದರು (೫೯). ತಂದಿದ್ದ ಅನ್ನದಲ್ಲಿ ನಾಲ್ಕು ಭಾಗಗಳನ್ನು ಮಾಡಿ ಒಂದು ಭಾಗವನ್ನು ಜಲಜಂತುಗಳಿಗೆ ಅರ್ಪಿಸಿದರು. ಭೂತಗಳಿಗೂ ದೇವತೆಗಳಿಗೂ ಒಂದೊಂದು ಭಾಗವನ್ನು ಸಮರ್ಪಿಸಿದರು. ಉಳಿದ ಒಂದು ಭಾಗದಲ್ಲಿ ಆ ಯತಿಗಳು ಸ್ವಲ್ಪ ಅನ್ನವನ್ನು ಭುಂಜಿಸಿ ಉಳಿದುದನ್ನು ಗುಣಶಾಲಿಗಳಾದ ಈ ಶಿಷ್ಯರಿಗೆ ಕೊಟ್ಟರು (೬೦-೬೧). ಶ್ರೀನಿವಾಸಶಾಸ್ತ್ರಿಗಳು ಅಲ್ಪವಾಗಿದ್ದ ಅದನ್ನೇ ಭಕ್ತಿಯಿಂದ ಸ್ವೀಕರಿಸಿ, ಹಸಿವಿನ ರೋಗಕ್ಕೆ ಚಿಕಿತ್ಸೆಯಾಯಿತೆಂದು ತೃಪ್ತರಾದರು. ಆಗ ಗುರುಗಳು "ಆಹಾ! ಈ ಶಿಷ್ಯನು ದೃಢವಾದ ನಿಷ್ಠೆಯಿಂದಿದ್ದಾನೆ. ಭಕ್ತಿಶಾಲಿಯೂ ಶ್ರದ್ಧಾವಂತನೂ ಆಗಿದ್ದಾನೆ. ಕರುಣೆಗೆ ಅರ್ಹನಾಗಿದ್ದಾನೆ" ಎಂದು ನಿಶ್ಚಯಿಸಿಕೊಂಡರು (೬೨-೬೩). ಅನಂತರ ಗುಹೆಯ ಸಮೀಪದಲ್ಲಿ ಅರಳಿದ್ದ ಹೂಗಳನ್ನು ತರುವಂತೆ ಶಾಸ್ತ್ರಿಗಳಿಗೆ ಹೇಳಿ, ವಿಧಿಪೂರ್ವಕವಾಗಿ ಅವರಿಂದ ಯತಿಗಳು ಪಾದಪೂಜೆಯನ್ನು ಮಾಡಿಸಿಕೊಂಡರು. ಶಾಸ್ತ್ರಿ

ಶಿಷ್ಯತ್ವೇನೋಪಜಗ್ರಾಹ ಶಾಸ್ತ್ರಿವರ್ಯಂ ಮಹೋದಯಮ್ ।
ಕಾರುಣ್ಯಸಿಂಧುರ್ಲೋಕಾನಾಂ ಪುಣ್ಯಾನಾಂ ಪರಿಪಾಕತಃ ॥ ೬೫

ಗೀತಾಯಾಃ ಪ್ರಥಮೇ ಷಟ್ಕೇ ಶಿಷ್ಯಾಯ ಪ್ರತಿಭಾಜುಷೇ ।
ಗುರುರಾಡ್ ಬೋಧಯಾಮಾಸ ಸರ್ವವೇದಾಂತಸಂಗ್ರಹಮ್ ॥ ೬೬

ಅತ್ಯಂತಗೋಪನೀಯಂ ತತ್ಪರತತ್ತ್ವಂ ಬುಧಾಗ್ರಣೀಃ ।
ಕೃಪಯಾ ಪರಯಾ ಸರ್ವಂ ಶಿಷ್ಯಾಯಾಸಾವುಪಾದಿಶತ್ ॥ ೬೭

ಏವಂ ದೇಶಿಕವರ್ಯೋಽಸೌ ಸಚ್ಛಿಷ್ಯೇಽಸ್ಮಿನ್ ಮಹಾತ್ಮನಿ ।
ಜ್ಞಾನವಿಜ್ಞಾನಸರ್ವಸ್ವಂ ನಿಕ್ಷಿಪ್ಯ ಮುದಮಾಪ್ತವಾನ್ ॥ ೬೮

ತತೋಽನ್ಯತ್ರ ವಿನಿರ್ಯಾತುಮುಪಾಕ್ರಮತ ಯೋಗಿರಾಟ್ ।
ಅನುಗಂತುಂ ಸಮುದ್ಯುಕ್ತಸ್ತಂ ಶಿಷ್ಯೋ ವಿನಯಾನತಃ ॥ ೬೯

ತತೋಽಬ್ರವೀನ್ಮಹಾತೇಜಾಃ ಶಿಷ್ಯಂ ಶಾಸ್ತ್ರಿಮಹೋದಯಮ್ ।
ಅನುಗಂತುಂ ನ ತೇ ಯುಕ್ತಂ ಮಾಂ ದೂರಗಮನೋತ್ಸುಕಮ್ ॥

ಗಳನ್ನು ತಮ್ಮ ಶಿಷ್ಯನೆಂದು ಸ್ವೀಕರಿಸಿದರು. ದಯಾಸಿಂಧುಗಳಾದ ಆ ಯತೀಶ್ವರರು ಶ್ರೀನಿವಾಸಶಾಸ್ತ್ರಿಗಳನ್ನು ಈ ರೀತಿಯಲ್ಲಿ ಶಿಷ್ಯನೆಂದು ಸ್ವೀಕಾರಮಾಡಿದ್ದು ನಮ್ಮಂತಹ ಜನರ ಪುಣ್ಯಪರಿಪಾಕದಿಂದಲೇ ಸರಿ (೬೪-೬೫). ಅನಂತರ ಗುರುರಾಜರೆನಿಸಿದ ಆ ಯತಿಗಳು ಪ್ರತಿಭಾಶಾಲಿಯಾದ ತಮ್ಮ ಶಿಷ್ಯನಿಗೆ, ಭಗವದ್ಗೀತೆಯ ಮೊದಲನೆಯ ಆರು ಅಧ್ಯಾಯಗಳನ್ನು ಬೋಧಿಸಿದರು. ಅದರಲ್ಲಿ ಸರ್ವವೇದಾಂತದ ಸಾರವನ್ನು ಸಂಗ್ರಹವಾಗಿ ನಿರೂಪಿಸಿದರು (೬೬). ಅತ್ಯಂತ ರಹಸ್ಯವಾದ ಪರತತ್ತ್ವವನ್ನು ಆ ಜ್ಞಾನಿಗಳು ತಮ್ಮ ಶಿಷ್ಯನಿಗೆ ಕೃಪೆಯಿಂದ ತಿಳಿಸಿಕೊಟ್ಟರು. ದೇಶಿಕೋತ್ತಮರಾದ ಆ ಯತಿಗಳು ಮಹಾತ್ಮನಾದ ಸಚ್ಛಿಷ್ಯನು ದೊರಕಿದನೆಂದು, ಜ್ಞಾನವಿಜ್ಞಾನಗಳ ಭಂಡಾರವನ್ನೇ ಅವನಿಗೆ ಒಪ್ಪಿಸಿ ಸಂಪ್ರೀತರಾದರು (೬೭-೬೮). ಆ ಮೇಲೆ ಶ್ರೀ ನಾರಾಯಣಯತೀಶ್ವರರು ಮುಂದೆಲ್ಲಿಗೋ ಹೋಗುವುದಕ್ಕೆ ಸಿದ್ಧರಾದರು. ಆಗ ಈ ಶಿಷ್ಯನೂ ಅವರನ್ನು ಹಿಂಬಾಲಿಸಿ ಹೊರಡಲು ಸಿದ್ಧನಾದನು! (೬೯). ಅದನ್ನು ಕಂಡು ಮಹಾತೇಜಸ್ವಿಗಳಾದ ಆ ಯತಿಗಳು “ ಅಯ್ಯಾ, ನೀನು ನನ್ನನ್ನು

ನ ಕೇವಲಂ ತ್ವಾಮುದ್ಧರ್ತುಂ ಪರಂ ತತ್ತ್ವಂ ಸಮೀರಿತಮ್ ।
ಕಿಂತು ಮೋಹವಿಪನ್ನಾನಾಮನ್ಯೇಷಾಂ ಹಿತಮೀಪ್ಸಿತಮ್ ॥ ೭೧

ತಸ್ಮಾದ್ಭವಾನಿಮಾಂ ವಿದ್ಯಾಂ ಲೋಕಾನಾಮುದ್ದಿಧೀರ್ಷಯಾ ।
ಪಾತ್ರಮರ್ಹಂ ಸಮಾಸಾದ್ಯ ಸಮಸ್ತಾಂ ಬೋಧಯತ್ವಿತಿ ॥ ೭೨

ವಿನಯಾನತಮೂರ್ಧಾಸೌ ಗುರೋರಾಜ್ಞಾಮಮಾನಯತ್ ।
ಪ್ರಯುಜ್ಯಾಶಿಷಮನ್ಯತ್ರ ಜಗಾಮ ಗುರುರೀಶ್ವರಃ ॥ ೭೩

ಶಿರವೇಲು ಇತಿ ಖ್ಯಾತೇ ಗ್ರಾಮೇ ಕಶ್ಚಿದ್ವಟುರ್ಬಭೌ ।
ಲಕ್ಷ್ಮಣಾಖ್ಯೋ ಮಹಾಪ್ರಾಜ್ಞೋ ಬಾಲಃ ಸ್ಕಂದ ಇವಾಪರಃ ॥ ೭೪

ಜ್ಞಾತ್ವಾ ತಮರ್ಹಂ ಸಚ್ಛಿಷ್ಯಂ ಶ್ರೀನಿವಾಸಾಭಿಧೋ ಗುರುಃ ।
ತಸ್ಮೈ ದಿದೇಶ ಸದ್ವಿದ್ಯಾಂ ಪಾರಂಪರ್ಯಾಗತಂ ಧನಮ್ ॥ ೭೫

ಹಿಂಬಾಲಿಸಬೇಡ. ನಾನು ಬಹುದೂರ ಹೋಗಬೇಕಾಗಿದೆ. ಈಗ ನಾನು ಉಪದೇಶಿಸಿದ ಪರತತ್ತ್ವವು ನಿನ್ನೊಬ್ಬನನ್ನು ಉದ್ಧರಿಸುವುದಕ್ಕಾಗಿ ಮಾತ್ರವೇ ಅಲ್ಲ. ಅಜ್ಞಾನದ ವಿಪತ್ತಿಗೆ ಸಿಕ್ಕಿರುವ ಇತರರ ಉದ್ಧಾರವೂ ಆಗಲೆಂದು ನಿನಗೆ ಉಪದೇಶಿಸಿದ್ದೇನೆ (೭೦-೭೧). ಆದ್ದರಿಂದ ನೀನು ಲೋಕೋದ್ಧಾರದ ಇಚ್ಛೆಯಿಂದ ಕೆಲಸಮಾಡಬೇಕು. ಅರ್ಹನಾದ ಪಾತ್ರನನ್ನು ನೋಡಿ ಈ ವಿದ್ಯೆಯನ್ನು ಉಪದೇಶಿಸು. ಇದರಿಂದ ಲೋಕಕಲ್ಯಾಣವಾಗಲಿ " ಎಂದು ಹೇಳಿದರು (೭೨). ಅದನ್ನು ಕೇಳಿ ಶ್ರೀನಿವಾಸಶಾಸ್ತ್ರಿಗಳು ಗುರುಗಳಿಗೆ ವಿನಯದಿಂದ ತಲೆಬಾಗಿ ವಂದಿಸಿ, ಗುರ್ವಾಜ್ಞೆಯಂತೆ ನಡೆಯುವೆನೆಂದು ನಿವೇದಿಸಿದರು. ಅನಂತರ ಸ್ವತಂತ್ರೇಚ್ಛರಾದ ಆ ಯತೀಶ್ವರರು ಶಿಷ್ಯನನ್ನು ಆಶೀರ್ವದಿಸಿ ಹೊರಟುಹೋದರು (೭೩). ಇತ್ತಲಾಗಿ ಶಿರವೇಲು ಎಂಬ ಗ್ರಾಮದಲ್ಲಿ ಒಬ್ಬ ಬ್ರಹ್ಮಚಾರಿಯಾದ ಬಾಲಕನಿದ್ದನು. ಆತನ ಹೆಸರು ಲಕ್ಷ್ಮಣ. ಮಹಾಪ್ರಾಜ್ಞನಾದ ಆ ವಟುವು ಷಣ್ಮುಖನಂತೆ ಅತ್ಯಂತ ತೇಜಸ್ವಿಯಾಗಿದ್ದನು (೭೪). ಶ್ರೀನಿವಾಸಗುರುಗಳು ಆ ಬಾಲಕನನ್ನು ನೋಡಿ, ಈತನು ಬ್ರಹ್ಮವಿದ್ಯೆಗೆ ಅರ್ಹನಾದ ಪಾತ್ರನೆಂದು ನಿರ್ಧರಿಸಿದರು. ಅನಂತರ ಪರಂಪರಾಗತವಾದ ಅಮೂಲ್ಯಧನವೆನಿಸಿದ

ಅಕ್ಷಯ್ಯಂ ಧನಮೇತದ್ವೈ ಶಿಷ್ಯವೃಂದೇ ನಿವೇಶಯ ।
ಇತ್ಯಾದಿಶ್ಯ ಗುರುಃ ಶಿಷ್ಯಂ ಬ್ರಹ್ಮಭೂಯಂ ಗತಸ್ತತಃ ॥ ೭೬

ಸೋಽಯಂ ಲಕ್ಷ್ಮಣಯೋಗೀಂದ್ರೋ ಸರ್ವವಿದ್ಯಾನಿಧಿರ್ಮಹಾನ್ ।
ಪ್ರಕೃತ್ಯಾ ಕೋಪನೋಽತ್ಯರ್ಥಂ ಬಭೂವ ಜ್ವಲನೋ ಯಥಾ ॥ ೭೭

ತಸ್ಮಿನ್ ಕಾಲೇಽಭವನ್ನಾಮ್ನಾ ನೃಹರಿರ್ದ್ವಿಜಸತ್ತಮಃ ।
ಶಾಂತಿದಾಂತಿಕ್ಷಮಾಶೀಲೋ ರಾಯದುರ್ಗಾಭಿಧೇ ಪುರೇ ॥ ೭೮

ವಿನೀತಃ ಸತ್ತ್ವಸಂಪನ್ನೋ ಧರ್ಮನಿಷ್ಠಃ ಸತಾಂ ಮತಃ ।
ವೇದವಿತ್ಕುಲಸಂಜಾತೋ ವೇದಜ್ಞಃ ಶಾಸ್ತ್ರಪಾರಗಃ ॥ ೭೯

ಸ ಕದಾಚಿದುಪಾಸರ್ಪಲ್ಲಕ್ಷ್ಮಣಾಭಿಧಯೋಗಿನಮ್ ।
ಜಿಜ್ಞಾಸುಶ್ಚ ಮುಮುಕ್ಷುಶ್ಚ ಶ್ರದ್ಧಾಭಕ್ತಿಸಮನ್ವಿತಃ ॥ ೮೦

ಬ್ರಹ್ಮವಿದ್ಯೆಯನ್ನು ಆ ವಟುವಿಗೆ ಉಪದೇಶಿಸಿದರು (೭೫). ಆ ಶಿಷ್ಯನನ್ನು ಕುರಿತು "ಲಕ್ಷ್ಮಣ, ಈ ಬ್ರಹ್ಮವಿದ್ಯೆಯು ಅಕ್ಷಯವಾದ ಧನವೆಂದು ತಿಳಿ. ಯೋಗ್ಯರಾದ ಶಿಷ್ಯರಿಗೆ ಇದನ್ನು ಉಪದೇಶಿಸಿ, ಅವರಲ್ಲಿ ಸ್ಥಿರವಾಗಿರುವಂತೆ ಸ್ಥಾಪಿಸು" ಎಂದು ತಿಳಿಸಿ, ಶ್ರೀನಿವಾಸಗುರುಗಳು ಬ್ರಹ್ಮೈಕ್ಯವನ್ನು ಹೊಂದಿದರು (೭೬). ಹೀಗೆ ಉಪದೇಶವನ್ನು ಪಡೆದ ಬ್ರಹ್ಮಚಾರಿಯೇ ಮುಂದೆ ಲಕ್ಷ್ಮಣಯೋಗೀಂದ್ರರೆಂದು ವಿಖ್ಯಾತರಾದರು. ಅವರು ಸಮಸ್ತ ವಿದ್ಯೆಗಳಿಗೂ ನಿಧಿಯಾಗಿದ್ದರು. ಆದರೆ ಅವರದು ಬಹಳ ಕೋಪದ ಸ್ವಭಾವ ವಾಗಿತ್ತು. ಅಗ್ನಿಯಂತೆ ಇದ್ದರು (೭೭). ಆ ಸಮಯದಲ್ಲಿ ರಾಯದುರ್ಗ ವೆಂಬ (ಬಳ್ಳಾರಿ) ಪಟ್ಟಣದಲ್ಲಿ ಶ್ರೀ ನರಹರಿಯೆಂಬ ಬ್ರಾಹ್ಮಣೋತ್ತಮ ರಿದ್ದರು. ಅವರು ಶಾಂತರೂ ದಾಂತರೂ ಕ್ಷಮಾಶೀಲರೂ ಆಗಿದ್ದರು. ವಿನಯಶಾಲಿಗಳೂ ಸತ್ತ್ವಗುಣಯುಕ್ತರೂ ಧರ್ಮನಿಷ್ಠರೂ ಆಗಿದ್ದರು. ಸಜ್ಜನರಿಗೆ ಅವರ ವಿಷಯದಲ್ಲಿ ಬಹಳ ಪೂಜ್ಯಬುದ್ಧಿ ಇತ್ತು. ವೈದಿಕವಂಶ ದಲ್ಲಿ ಜನಿಸಿದವರೂ ಸ್ವಯಂ ವೇದಜ್ಞರೂ ಆದ ಆ ಮಹನೀಯರು ವಿವಿಧ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು (೭೮-೭೯). ಜಿಜ್ಞಾಸುಗಳೂ ಮುಮುಕ್ಷುಗಳೂ ಆದ ಈ ಬ್ರಾಹ್ಮಣೋತ್ತಮರು ಶ್ರದ್ಧಾಭಕ್ತಿಸಮನ್ವಿತ ರಾಗಿ, ಒಂದುಸಲ ಲಕ್ಷ್ಮಣಯೋಗೀಂದ್ರರ ಬಳಿಗೆ ಹೋದರು. ತಮ್ಮನ್ನು

ಲಕ್ಷ್ಮಣೋ ದೇಶಿಕೇಂದ್ರೋऽಸೌ ಪರಿಗೃಹ್ಯ ಮನೀಷಿಣಮ್ ।
ಶಿಷ್ಯಂ ತಂ ಬೋಧಯಾಮಾಸ ಬ್ರಹ್ಮತತ್ತ್ವಮುದಾರಧೀಃ ॥ ೮೧

ಗುರುಶುಶ್ರೂಷಯಾ ಭಕ್ತ್ಯಾ ಕ್ಷಮಯಾ ಚ ತಿತಿಕ್ಷಯಾ ।
ಕ್ಲೇಶೇನ ಮಹತಾ ವಿದ್ಯಾಮವಾಪ ದ್ವಿಜಸತ್ತಮಃ ॥ ೮೨

ಅಗ್ನಿಕಲ್ಪೋ ಗುರುಸ್ತಸ್ಯ ಲಕ್ಷ್ಮಣೇಂದ್ರೋ ದುರಾಸದಃ ।
ಪೃಷ್ಟೇ ದೋಷಂ ತಥಾಪೃಷ್ಟೇ ದೋಷಂ ದರ್ಶಯತೇ ಪ್ರಭುಃ ॥ ೮೩

ತಥಾಪಿ ಸ್ಥಿರಚಿತ್ತೋऽಸೌ ಲೇಭೇ ಗುರುಕೃಪಾಂ ಪರಾಮ್ ।
ಘರ್ಮತಪ್ತೋ ಜನಪದಃ ಕಾಲೇ ವೃಷ್ಟಿಮಿವಾಚಿರಾತ್ ॥ ೮೪

ದಹನ್ನಪಿ ಮಹೀಂ ವಹ್ನಿಃ ಕರೋತಿ ಫಲವತ್ತರಾಮ್ ।
ಶಪನ್ನಪಿ ಗುರುಃ ಶಿಷ್ಯಂ ತನೋತಿ ಗುಣವತ್ತರಮ್ ॥ ೮೫

ಶಿಷ್ಯನನ್ನಾಗಿ ಸ್ವೀಕರಿಸಲೆಂಬುದು ಅವರ ಉದ್ದೇಶವಾಗಿತ್ತು (೮೦). ಧೀಮಂತರಾದ ಲಕ್ಷ್ಮಣಯೋಗೀಂದ್ರರು ಪ್ರಾಜ್ಞರಾದ ಈ ದ್ವಿಜೋತ್ತಮರನ್ನು ಶಿಷ್ಯರನ್ನಾಗಿ ಸ್ವೀಕರಿಸಿ ಬ್ರಹ್ಮತತ್ತ್ವವನ್ನು ಬೋಧಿಸಿದರು. ಆದರೆ ಶ್ರೀ ನರಹರಿಗುರುಗಳಿಗೆ ವಿದ್ಯಾಭ್ಯಾಸದ ಸಮಯದಲ್ಲಿ ಅತ್ಯಂತ ಕ್ಲೇಶವಾಯಿತು. ಆದರೂ ಭಕ್ತಿಯಿಂದ ಗುರುಸೇವೆಮಾಡುತ್ತ ಕ್ಷಮೆಯಿಂದಲೂ ತಾಳ್ಮೆಯಿಂದಲೂ ಬ್ರಹ್ಮವಿದ್ಯೆಯನ್ನು ಕಲಿತರು (೮೧-೮೨). ಗುರುಗಳಾದ ಲಕ್ಷ್ಮಣಯೋಗೀಂದ್ರರು ಅಗ್ನಿಯಂತೆ ಕೋಪಿಷ್ಠರಾಗಿದ್ದರು. ಅವರನ್ನು ಸಮೀಪಿಸುವುದೇ ಕಷ್ಟವಾಗಿತ್ತು. ಯಾವುದಾದರೂ ಗೊತ್ತಾಗಲಿಲ್ಲವೆಂದು ಶಿಷ್ಯನು ಕೇಳಿದರೂ ಅವರಿಗೆ ಕೋಪ. ಕೇಳದಿದ್ದರೂ ಕೋಪ! ಹೇಗೆ ಮಾಡಿದರೂ ಅದು ತಪ್ಪೆನ್ನುತ್ತಿದ್ದರು! (೮೩). ಆದರೂ ಸ್ಥಿರಚಿತ್ತರಾದ ಶ್ರೀ ನರಹರಿಗುರುಗಳು ಉತ್ಕೃಷ್ಟವಾದ ಗುರುಕೃಪೆಯನ್ನು ಪಡೆದರು. ಬೇಸಿಗೆಯಲ್ಲಿ ಬಿಸಿಲಿನಲ್ಲಿ ಬೆಂದ ರಾಷ್ಟ್ರವು ಮಳೆಗಾಲದಲ್ಲಿ ಮಳೆಯನ್ನು ಪಡೆಯುವಂತೆ, ಕೆಲವು ದಿನಗಳಲ್ಲಿ ಅವರು ಗುರುಕೃಪೆಗೆ ಪಾತ್ರರಾದರು (೮೪). ಅಗ್ನಿಯು ನೆಲವನ್ನು ಸುಟ್ಟರೂ ಅದನ್ನು ಹೆಚ್ಚು ಸಾರವತ್ತನ್ನಾಗಿ ಮಾಡುವುದಲ್ಲವೆ? ಹಾಗೆಯೇ ಗುರುವು ಶಿಷ್ಯನನ್ನು ಬಯ್ದರೂ ಅವನನ್ನು

ಏವಂ ಪ್ರಯಾಸಲಬ್ಧಾಂ ತಾಂ ವಿದ್ಯಾಂ ನೃಹರಿಸದ್ಗುರುಃ ।
ಸಯುಕ್ತಿಸೂಕ್ತಿಭಿಸ್ತೇನೇ ಶಾಖಾಭಿರಿವ ವಲ್ಲರೀಮ್ ॥ ೮೬

ವೇದಶಾಸ್ತ್ರಪುರಾಣಾದಿವಚನೈರ್ವಿವಿಧೈರ್ಬುಧಃ ।
ಭಾಷಾಪ್ರಬಂಧೈರ್ಗಾಥಾಭಿಶ್ಚಕಾರ ಬಹುವಿಸ್ತೃತಾಮ್ ॥ ೮೭

ಲಕ್ಷ್ಮಣೇಂದ್ರವದತ್ಯಂತಕ್ರೋಧನಸ್ಯ ಗುರೋರ್ವಚಃ ।
ನ ಗೃಹ್ಣೀಯುರ್ಜನಾ ಘೋರೇ ಪತಿತಾ ಮೋಹಸಾಗರೇ ॥ ೮೮

ಏವಂ ಹಿ ತೇಷಾಮುದ್ಧಾರೋ ನೈವ ಸ್ಯಾಜ್ಜನ್ಮಕೋಟಿಭಿಃ ।
ಇತ್ಯೇವಂ ಚಿಂತಯನ್ ಧೀಮಾನ್ ಕರುಣಾಸಾಗರೋ ಗುರುಃ ॥ ೮೯

ನಿತ್ಯಾನುಕಂಪೋ ದೀನೇಷು ಶಾಂತೋ ದಾಂತಃ ಪ್ರಸನ್ನಧೀಃ ।
ಸರಲಃ ಸುಲಭೋ ಜಜ್ಞೇ ನೃಹರಿರ್ಗುರುಸತ್ತಮಃ ॥ ೯೦

ಹೆಚ್ಚು ಗುಣಶಾಲಿಯನ್ನಾಗಿ ಮಾಡುತ್ತಾನೆ (೮೫). ಈ ರೀತಿಯಲ್ಲಿ ಬಹು ಕ್ಲೇಶದಿಂದ ನರಹರಿಗುರುಗಳು ವಿದ್ಯೆಯನ್ನು ಸಂಪಾದಿಸಿದರು. ಅನಂತರ ಆ ಬ್ರಹ್ಮವಿದ್ಯೆಯನ್ನು ತಮ್ಮದೇ ಆದ ಯುಕ್ತಿಗಳಿಂದಲೂ ಸೂಕ್ತಿಗಳಿಂದಲೂ ವಿಸ್ತಾರವಾಗಿ ಬೆಳೆಸಿದರು. ಕೊಂಬೆಗಳು ಹರಡಿ ಬಳ್ಳಿಯು ವಿಸ್ತರಿಸುವಂತೆ, ಈ ವಿದ್ಯೆಯು ನರಹರಿಗುರುಗಳ ಯುಕ್ತಿಸೂಕ್ತಿಗಳಿಂದ ವಿಸ್ತೃತವಾಯಿತು (೮೬). ಆ ವಿದ್ವಾಂಸರು ವೇದಶಾಸ್ತ್ರಪುರಾಣವಚನಗಳಿಂದಲೂ ಲೋಕಭಾಷಾಪ್ರಬಂಧಗಳಿಂದಲೂ ಲೌಕಿಕನ್ಯಾಯಗಳಿಂದಲೂ ಈ ಬ್ರಹ್ಮವಿದ್ಯಾತತ್ತ್ವವನ್ನು ಸಕಲರಿಗೂ ಬೋಧವಾಗುವಂತೆ ಹಿಗ್ಗಿಸಿದರು (೮೭). "ಉಪದೇಶಮಾಡತಕ್ಕ ಗುರುವು ಲಕ್ಷ್ಮಣಯೋಗೀಂದ್ರರಂತೆ ಕ್ರೋಧಶೀಲನಾದರೆ, ಜನರು ಅವನ ಉಪದೇಶವನ್ನು ಗ್ರಹಿಸುವುದಕ್ಕೆ ಹಿಂಜರಿಯುತ್ತಾರೆ. ಆಗ ಘೋರವಾದ ಅಜ್ಞಾನಸಮುದ್ರದಲ್ಲಿ ಮುಳುಗಿದ ಜನರ ಉದ್ಧಾರವಾಗುವುದು ಹೇಗೆ? ಕೋಟಿ ಜನ್ಮಗಳನ್ನು ಕಳೆದರೂ ಈ ಸಂಸಾರಿಗಳು ಮುಕ್ತರಾಗುವುದಿಲ್ಲ" ಎಂಬುದಾಗಿ ಕರುಣಾಸಮುದ್ರರಾದ ಶ್ರೀ ನರಹರಿಸದ್ಗುರುಗಳು ಚಿಂತಿಸಿದರು (೮೮-೮೯). ಆದ್ದರಿಂದ ಅವರು ದೀನರಲ್ಲಿ ವಿಶೇಷವಾದ ಅನುಕಂಪೆಯನ್ನಿಟ್ಟು ಸದಾ ಶಾಂತರಾಗಿರುತ್ತಿದ್ದರು. ಇಂದ್ರಿಯಗಳನ್ನು ನಿಗ್ರಹಿಸಿ ಯಾವಾಗಲೂ ಪ್ರಸನ್ನಚಿತ್ತ

ಲಿಂಗಜಾತಿವಯೋರೂಪಭೇದತ್ರಯಮುಪಾಸ್ಯ ಸಃ ।
ಅದ್ವೈತವಿದ್ಯಾನಿಪುಣಶ್ಚಚಾರ ವಸುಧಾಮಿಮಾಮ್ ॥ ೯೧

ಪತಿತಾನುದ್ಧರನ್ ಯೋಗೀ ದಲಿತಾನ್ ಪರಿಪೋಷಯನ್ ।
ದೀನಾಂಶ್ಚ ಸದಯಂ ಗೃಹ್ಣನ್ ಅಜ್ಞಾಂಶ್ಚ ಪರಿಬೋಧಯನ್ ॥ ೯೨

ಉದ್ಧತಾನ್ ಶಮಯನ್ ಧೀರೋ ನಮ್ರಾನುನ್ನಮಯನ್ ಪ್ರಭುಃ ।
ಅಜ್ಞಾನಸಾಗರೇ ಮಗ್ನಾನುದ್ಧರನ್ ಜ್ಞಾನನೌಕಯಾ ॥ ೯೩

ರಕ್ಷನ್ ಮೋಹತಮೋಮಗ್ನಾನ್ ಜ್ಞಾನದೀಪೇನ ಭಾಸ್ವತಾ ।
ದಲಯನ್ ಪಂಡಿತಂಮನ್ಯಾನ್ ತೀಕ್ಷ್ಣಾಭಿರ್ಯುಕ್ತಿಹೇತಿಭಿಃ ॥ ೯೪

ಸಂಸಾರಗ್ರೀಷ್ಮಸಂತಪ್ತಾನ್ ಹರ್ಷಯನ್ ವಚನಾಮೃತೈಃ ।
ತಟಿತ್ವಾನಿವ ಸಂಪ್ರಾಪ್ತೋ ನರ್ತಯನ್ ಭಕ್ತಕೇಕಿನಃ ॥ ೯೫

ರಾಗಿದ್ದರು. ಶ್ರೀ ನರಹರಿಸದ್ಗುರುಗಳು ಸರಳಸ್ವಭಾವದವರಾಗಿ ಸಮಸ್ತ
ರಿಗೂ ಸುಲಭರಾಗಿದ್ದರು (೯೦). ಅದ್ವೈತವಿದ್ಯಾನಿಪುಣರಾದ
ಆ ಮಹನೀಯರು ಗಂಡಸು ಹೆಂಗಸೆಂಬ ಲಿಂಗಭೇದ, ಜಾತಿಭೇದ, ವಯೋ
ಭೇದಗಳನ್ನು ಗಣಿಸದೆ ಸತ್ಪಾತ್ರರಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸುತ್ತ
ಸಂಚರಿಸಿದರು (೯೧). ಆ ಯೋಗೀಂದ್ರರು ಪತಿತರನ್ನು ಉದ್ಧರಿಸುತ್ತ,
ದಲಿತರನ್ನು ಪರಿಪೋಷಿಸುತ್ತ, ದೀನರನ್ನು ದಯೆಯಿಂದ ಸ್ವೀಕರಿಸುತ್ತ,
ಅಜ್ಞರಿಗೆ ತಿಳಿವಳಿಕೆಯನ್ನು ಕೊಡುತ್ತ ದೇಶಗಳಲ್ಲಿ ಸಂಚರಿಸುತ್ತಿದ್ದರು (೯೨).
ಧೀರರಾದ ಆ ಸದ್ಗುರುಗಳು ಉದ್ಧತರ ಅಹಂಕಾರವನ್ನು ಮುರಿಯುತ್ತ,
ನಮ್ರರನ್ನು ಮೇಲಕ್ಕೆ ಎತ್ತುತ್ತ, ಅಜ್ಞಾನಸಾಗರದಲ್ಲಿ ಬಿದ್ದವರನ್ನು
ಜ್ಞಾನನೌಕೆಯಿಂದ ಪಾರಗಾಣಿಸುತ್ತ, ಮೋಹವೆಂಬ ಕತ್ತಲೆಯಲ್ಲಿ
ತಡವರಿಸುವವರನ್ನು ಉಜ್ಜ್ವಲವಾದ ಜ್ಞಾನದೀಪದಿಂದ ರಕ್ಷಿಸುತ್ತ, ಪಂಡಿತ
ರೆಂಬ ಗರ್ವದಿಂದ ಮೆರೆಯುವವರನ್ನು ಯುಕ್ತಿಗಳೆಂಬ ಹರಿತವಾದ
ಆಯುಧಗಳಿಂದ ಸವರುತ್ತ ಸಂಚಾರಮಾಡಿದರು (೯೩-೯೪). ಸಂಸಾರ
ವೆಂಬ ಬೇಸಿಗೆಯಲ್ಲಿ ಬೆಂಡಾದವರನ್ನು ವಚನಾಮೃತಗಳಿಂದ ಹರ್ಷ
ಪಡಿಸುತ್ತ, ಭಕ್ತರೆಂಬ ನವಿಲುಗಳನ್ನು ಮೇಘದಂತೆ ಕುಣಿಸುತ್ತ ಆಗಮಿಸಿ

ಶಾಸ್ತ್ರಾರಣ್ಯೇಷು ವಿಚರನ್ ದಲಯನ್ ಖಲಹಸ್ತಿನಃ ।
ಮೃಗಯೂಥಂ ಹರನ್ ದ್ವೈತಂ ರೇಜೇ ವೇದಾಂತಕೇಸರೀ ॥ ೯೬

ಬ್ರಹ್ಮವಿದ್ಯೋಪದೇಶೇನ ಮುಮುಕ್ಷೂನುದ್ಧರನ್ ಬಹೂನ್ ।
ಸ್ಥಿತೋ ಗೃಹಸ್ಥಧರ್ಮೇಷು ಪದ್ಮಪತ್ರಮಿವಾಂಭಸಿ ॥ ೯೭

ಶುಕ್ಲಾಬ್ದೇ ಪುಷ್ಯಬಹುಲೇ ತೃತೀಯಾಯಾಂ ಶುಭೇ ದಿನೇ ।
ಬ್ರಹ್ಮಭೂಯಂ ಗತೋ ವಿದ್ವಾನ್ ತ್ಯಕ್ತ್ವಾ ಜೀರ್ಣಂ ಕಲೇವರಮ್

ವಿಲಸತ್ಯೇವ ಸತತಂ ಶಿಷ್ಯಾಣಾಂ ಹೃದಯಾಂಬುಜೇ ।
ಅರ್ಚಿತಃ ಸ್ತುತಿಪುಷ್ಪೌಘೈಃ ಸದ್ಗುರುರ್ನಿತ್ಯನೂತನಃ ॥ ೯೯

ಲಕ್ಷ್ಮೀನೃಸಿಂಹಯೋಗೀಂದ್ರೋ ಗುರೋಸ್ತಸ್ಯ ತನೂದ್ಭವಃ ।
ಸಂಪ್ರಾಪ ಸಕಲಾಂ ವಿದ್ಯಾಂ ಪಿತ್ರ್ಯಂ ಧನಮಿವ ಪ್ರಭುಃ ॥ ೧೦೦

ದರು (೯೫). ವೇದಾಂತಕೇಸರಿಗಳಾದ ಶ್ರೀ ನರಹರಿಸದ್ಗುರುಗಳು ಶಾಸ್ತ್ರಗಳೆಂಬ ಅರಣ್ಯಗಳಲ್ಲಿ ಸಂಚರಿಸಿ ಖಳರೆಂಬ ಮದ್ದಾನೆಗಳನ್ನು ಸಿಂಹದಂತೆ ಸೀಳುತ್ತ, ದ್ವೈತವೆಂಬ ಮೃಗಯೂಥವನ್ನು ಸಂಹರಿಸುತ್ತ ವಿರಾಜಿಸಿದರು (೯೬). ಬ್ರಹ್ಮವಿದ್ಯೆಯನ್ನು ಮುಮುಕ್ಷುಗಳಾದ ಸಜ್ಜನರಿಗೆ ಉಪದೇಶಿಸಿ ಬಹುಜನರನ್ನು ಉದ್ಧಾರಮಾಡಿದರು. ಅವರು ಗೃಹಸ್ಥಧರ್ಮವನ್ನು ಪಾಲಿಸುತ್ತಿದ್ದರೂ, ನೀರಿನಲ್ಲಿರುವ ತಾವರೆಯ ಎಲೆಯಂತೆ ನಿರ್ಲಿಪ್ತರಾಗಿದ್ದರು (೯೭). ಈ ಪ್ರಕಾರದಲ್ಲಿ ಶಿಷ್ಯಕೋಟಿಯನ್ನುದ್ಧರಿಸಿ ಕೃತಕೃತ್ಯರಾದ ಶ್ರೀ ನರಹರಿಸದ್ಗುರುಗಳು ಶುಕ್ಲಸಂವತ್ಸರದ ಪುಷ್ಯ ಬಹುಳ ತದಿಗೆಯ ಶುಭದಿನದಲ್ಲಿ ಜೀರ್ಣವಾದ ತಮ್ಮ ಕಳೇಬರವನ್ನು ಪರಿತ್ಯಜಿಸಿ ಪರಬ್ರಹ್ಮನಲ್ಲಿ ಲೀನರಾದರು (೯೮). ಆ ಸದ್ಗುರುಗಳು ಶಿಷ್ಯರ ಹೃದಯಕಮಲದಲ್ಲಿ ಸ್ತುತಿಗಳೆಂಬ ಪುಷ್ಪಗಳಿಂದ ಸತತವೂ ಅರ್ಚಿತರಾಗುತ್ತ ನಿತ್ಯನೂತನರಾಗಿ ಸದಾ ವಿರಾಜಿಸುತ್ತಿರುವರು (೯೯). ಅವರ ಪುತ್ರರಾದ ಶ್ರೀ ಲಕ್ಷ್ಮೀನರಸಿಂಹಗುರುಗಳು ತಮ್ಮ ಪಿತೃವರ್ಯರಿಂದ ಸಕಲ ವಿದ್ಯೆಯನ್ನೂ ಕಲಿತರು. ಪಿತ್ರಾರ್ಜಿತವಾದ ಆಸ್ತಿಯನ್ನು ಪುತ್ರನು ಪಡೆಯುವಂತೆ ಶ್ರೀ ನರಹರಿಗುರುಗಳಿಂದ ಬ್ರಹ್ಮವಿದ್ಯೆಯನ್ನು ಪಡೆದರು (೧೦೦).

ಆದಿತ್ಯೇನಾಹಿತಂ ತೇಜಃ ಸಾಯಂ ಲಬ್ಧ್ವೇವ ಪಾವಕಃ ।
ಪಿತ್ರಾ ದಿಷ್ಟಮವಾಪ್ಯಾಸೌ ಬ್ರಹ್ಮಜ್ಞಾನಂ ಬಭೌ ಬುಧಃ ॥ ೧೦೧

ಲಕ್ಷ್ಮೀನೃಸಿಂಹೋ ಗುರುರಾಟ್ ಶಿಷ್ಯಕೋಟಿಂ ಸಮುದ್ಧರನ್ ।
ಜ್ಞಾನಾಮೃತೇನ ಸಂತೃಪ್ತಿಂ ಚಕಾರ ವಿದುಷಾಮಪಿ ॥ ೧೦೨

ಪಾಂಚಭೌತಿಕದೇಹಸ್ಯ ಸಂಪ್ರಾಪ್ತಿರ್ವಿದುಷಾಮುನಾ ।
ಮುಮುಕ್ಷುಹಿತಬೋಧೇನ ಸರ್ವಥಾ ಸಫಲೀಕೃತಾ ॥ ೧೦೩

ತತೋಽವತಾರಕೃತ್ಯಸ್ಯ ಸಮಾಪ್ತಿಂ ವೀಕ್ಷ್ಯ ಸದ್ಗುರುಃ ।
ಜಡಂ ದೇಹಂ ಪರಿತ್ಯಕ್ತುಂ ಚಕಾರ ಮತಿಮಾನ್ ಮತಿಮ್ ॥ ೧೦೪

ನಂದನಾಷಾಢಬಹುಲೇ ಚತುರ್ದಶ್ಯಾಂ ಭೃಗೋರ್ದಿನೇ ।
ಲಬ್ಧಜನ್ಮಾ ಗುರುವರಃ ಶಿಷ್ಯಪುಣ್ಯವಿಶೇಷತಃ ॥ ೧೦೫

ಸೂರ್ಯನು ಅಸ್ತಂಗತನಾಗುವಾಗ ತನ್ನ ತೇಜಸ್ಸನ್ನು ಅಗ್ನಿಯಲ್ಲಿ ಬಿಟ್ಟುಹೋಗುವನು. ಆದರಿಂದ ಅಗ್ನಿಯು ತೇಜೋವಿಶೇಷವನ್ನು ಪಡೆದು ಜ್ವಲಿಸುವಂತೆ, ಪಿತೃವರ್ಯರಾದ ಶ್ರೀ ನರಹರಿಗುರುಗಳು ನಿಕ್ಷೇಪವಾಗಿಟ್ಟ ಬ್ರಹ್ಮವಿದ್ಯೆಯನ್ನು ಪಡೆದು ಶ್ರೀ ಲಕ್ಷ್ಮೀನರಸಿಂಹಗುರುಗಳು ರಾರಾಜಿಸುತ್ತಿದ್ದರು (೧೦೧). ಗುರುರಾಜರೆಂದು ವಿಖ್ಯಾತರಾದ ಶ್ರೀ ಲಕ್ಷ್ಮೀನರಸಿಂಹ ಯೋಗಿಗಳು ಬಹುಮಂದಿ ಶಿಷ್ಯರಿಗೆ ತತ್ತ್ವೋಪದೇಶವನ್ನು ಮಾಡಿ ಉದ್ಧರಿಸಿದರಲ್ಲದೆ, ವಿದ್ವಾಂಸರಿಗೂ ಸಹ ಜ್ಞಾನಾಮೃತವನ್ನು ಹಂಚಿ ಸಂತೋಷಪಡಿಸಿದರು (೧೦೨). ಮೋಕ್ಷಾರ್ಥಿಗಳಿಗೆ ಹಿತಕರವಾದ ಮಾರ್ಗವನ್ನು ಬೋಧಿಸಿ, ಈ ಜ್ಞಾನಿಶ್ರೇಷ್ಠರು ತಮಗೆ ಪ್ರಾಪ್ತವಾದ ಪಾಂಚಭೌತಿಕದೇಹವನ್ನು ಸರ್ವವಿಧದಲ್ಲಿಯೂ ಸಾರ್ಥಕಪಡಿಸಿಕೊಂಡರು (೧೦೩). ಹೀಗೆಯೇ ಕೆಲವು ಕಾಲವು ಕಳೆಯಲು, ಧೀಮಂತರಾದ ಈ ಸದ್ಗುರುಗಳಿಗೆ ತಾವು ಅವತರಿಸಿದ ಉದ್ದೇಶವು ಸಮಾಪ್ತವಾಯಿತೆಂದು ತೋರಿತು. ಆಗ ಈ ಜಡದೇಹವನ್ನು ಪರಿತ್ಯಜಿಸಬೇಕೆಂದು ಅವರಿಗೆ ಇಚ್ಛೆಯಾಯಿತು (೧೦೪). ಶ್ರೀ ಲಕ್ಷ್ಮೀನರಸಿಂಹಗುರುಗಳು ನಂದನ ಸಂವತ್ಸರದ ಆಷಾಢ ಬಹುಳ ಚತುರ್ದಶೀ ಶುಕ್ರವಾರದಲ್ಲಿ, ಶಿಷ್ಯರ ಪುಣ್ಯ

ತತಃ ಪರಾಭವೇ ಭಾದ್ರೇ ಶುಕ್ಲಪಕ್ಷೇ ಗುರೋರ್ದಿನೇ ।
ನವಮ್ಯಾಮರ್ಧರಾತ್ರೇಽಸೌ ಬ್ರಹ್ಮಭೂಯಂ ಗತೋ ಗುರುಃ ॥ ೧೦೬

ತಸ್ಯ ಪುತ್ರೋ ವಿಜಯತೇ ಸಿಂಹಾದ್ರಿಃ ಸರ್ವಶಾಸ್ತ್ರವಿತ್ ।
ಶಿಷ್ಯಾಂಸ್ತತ್ತ್ವೋಪದೇಶೇನ ಬ್ರಹ್ಮವಿತ್ ಪಾವಯಿಷ್ಯತಿ ॥ ೧೦೭

ಬ್ರಹ್ಮವಿದ್ಯಾ ವಿಜಯತಾಂ ಶಂಕರಾಚಾರ್ಯಪೂಜಿತಾ ।
ನರಹರ್ಯಾದಿಗುರುಭಿರ್ಭೂಷಯಿತ್ವೋಪಬೃಂಹಿತಾ ॥ ೧೦೮

ಜಯತ್ಯತಿಬಲಾ ವಿದ್ಯಾ ಸಂಪ್ರದಾಯಪುರಸ್ಕೃತಾ ।
ಜಯತ್ಯತಿಬಲೋ ನಿತ್ಯಂ ಸದ್ಗುರುಃ ಸಂಪ್ರದಾಯವಿತ್ ॥ ೧೦೯

ಈಶ್ವರಾನುಗ್ರಹಾದೇವ ಪುಂಸಾಮದ್ವೈತವಾಸನಾ ।
ಸದ್ಗುರೋಶ್ಚ ತಥಾ ಲಾಭಃ ಶ್ರದ್ಧಾ ಭಕ್ತಿಶ್ಚ ಜಾಯತೇ ॥ ೧೧೦

ವಿಶೇಷದಿಂದ ಜನ್ಮವನ್ನು ತಳೆದಿದ್ದರು (೧೦೫). ಅವರು ಶಿಷ್ಯರನ್ನುದ್ಧರಿಸಿ ತಮ್ಮ ಕೃತ್ಯವನ್ನು ಮುಗಿಸಿದಮೇಲೆ, ಪರಾಭವ ಸಂವತ್ಸರದ ಭಾದ್ರಪದ ಮಾಸ ಶುಕ್ಲಪಕ್ಷ ನವಮೀ ಗುರುವಾರದ ದಿನ ಅರ್ಧರಾತ್ರಿ ಸಮಯದಲ್ಲಿ ಪರಬ್ರಹ್ಮನಲ್ಲಿ ಲೀನರಾದರು (೧೦೬). ಅವರ ಪುತ್ರರೂ ತತ್ತ್ವಜ್ಞಾನಿಗಳೂ ಆದ ಶ್ರೀ ಸಿಂಹಾದ್ರಿಗುರುಗಳು ಸರ್ವಶಾಸ್ತ್ರಗಳನ್ನೂ ಬಲ್ಲವರಾಗಿದ್ದಾರೆ. ಅವರು ಶಿಷ್ಯರಿಗೆ ತತ್ತ್ವೋಪದೇಶವನ್ನು ಮಾಡುತ್ತ ಶಿಷ್ಯರನ್ನು ಉದ್ಧರಿಸತಕ್ಕವರಾಗಿದ್ದಾರೆ (೧೦೭). ಶ್ರೀ ಶಂಕರಾಚಾರ್ಯರಿಂದ ಪೂಜಿತವಾಗಿಯೂ ಶ್ರೀ ನರಹರ್ಯಾದಿಸದ್ಗುರುಗಳಿಂದ ಅಲಂಕರಿಸಲ್ಪಟ್ಟು ವಿಸ್ತಾರಗೊಳಿಸಲ್ಪಟ್ಟದೂ ಆದ ಬ್ರಹ್ಮವಿದ್ಯೆಯು ವಿಜಯಹೊಂದಲಿ! (೧೦೮). ಸಂಪ್ರದಾಯದಿಂದ ಬಂದ ವಿದ್ಯೆಯು ಅತ್ಯಂತ ಬಲಶಾಲಿಯಾಗಿ ಉತ್ಕರ್ಷವನ್ನು ಹೊಂದುತ್ತದೆ. ಸಂಪ್ರದಾಯವನ್ನು ಬಲ್ಲ ಸದ್ಗುರುವು ಅತ್ಯಂತ ಪ್ರಬಲನಾಗಿ ಸರ್ವೋತ್ಕರ್ಷವನ್ನು ಪಡೆಯುತ್ತಾನೆ (೧೦೯). ಭಗವಂತನ ಅನುಗ್ರಹದಿಂದಲೇ ಜನರಿಗೆ ಅದ್ವಯ ತತ್ತ್ವದಲ್ಲಿ ಆಸಕ್ತಿಯುಂಟಾಗುತ್ತದೆ. ಸದ್ಗುರುವಿನ ಲಾಭವೂ ಗುರುವಚನದಲ್ಲಿ ಶ್ರದ್ಧಾಭಕ್ತಿಗಳೂ ಭಗವಂತನ ಅನುಗ್ರಹದಿಂದ ಮಾತ್ರವೇ ಉಂಟಾಗುತ್ತವೆ (೧೧೦).

अस्ति दंडावतीतीरे नडहळ्ळीति विश्रुतः ।
ग्रामो रामेश्वरविभुप्रसादविमलीकृतः ॥ ೧

विश्वामित्रान्ववायोऽभूद् द्विजस्तिरुमलाभिधः ।
तत्र शिष्यः सदाचारो नृहरेः करुणात्मनः ॥ ೨

प्रियाः संजज्ञिरे तस्य तनया विनयोज्ज्वलाः ।
तच्छरीराद्विनिष्क्रान्ताश्चत्वार इव बाहवः ॥ ೩

तेषामन्यतमो धीमान् रंगनाथपदश्रुतः ।
भक्त्या तुष्टाव निष्ठावान् इमां गुरुपरंपराम् ॥ ೪

ದಂಡಾವತೀನದಿಯ ತೀರದಲ್ಲಿ ನಡಹಳ್ಳಿ ಎಂಬ ಒಂದು ಗ್ರಾಮವಿದೆ. ಶ್ರೀರಾಮೇಶ್ವರಸ್ವಾಮಿಯ ಅನುಗ್ರಹದಿಂದ ಆ ಗ್ರಾಮವು ಪರಿಶುದ್ಧವಾಗಿದೆ. ಅಲ್ಲಿ ವಿಶ್ವಾಮಿತ್ರಗೋತ್ರೋದ್ಭವರಾದ ಶ್ರೀ ತಿರುಮಲ (ಶ್ರೀ. ತಿಮ್ಮಪ್ಪ) ಎಂಬ ಸದಾಚಾರಶೀಲರಾದ ವಿಪ್ರರೊಬ್ಬರಿದ್ದರು. ಅವರು ಕರುಣಾಳುಗಳಾದ ಶ್ರೀ ನರಹರಿಸದ್ಗುರುಗಳ ಶಿಷ್ಯರಾಗಿದ್ದರು. ಅವರಿಗೆ ಪ್ರೀತಿಪಾತ್ರರೂ ವಿನಯಶೀಲರೂ ಆದ ನಾಲ್ವರು ಪುತ್ರರು, ನಾಲ್ಕು ಬಾಹುಗಳಂತೆ ಜನಿಸಿದರು. ಆ ಪುತ್ರರಲ್ಲಿ ಒಬ್ಬನಾದ ರಂಗನಾಥ ಎಂಬ ಧೀಮಂತನು ಶ್ರದ್ಧಾಭಕ್ತಿಗಳಿಂದ ಗುರುಪರಂಪರೆಯನ್ನು ಈ ಪ್ರಕಾರವಾಗಿ ಸ್ತುತಿಸಿದನು (೧-೪).